ಸಹಕಾರವನ್ನು ಕೂಡ ಮತ್ತೊಮ್ಮೆ ಕೇಳಿ ಈ ಮುಂದೆ ನಡೆಯತಕ್ಕ ಕಲಾಪಗಳಿಗೆ ತಾವು ಅವಕಾಶ ಮಾಡಿಕೊಡಬೇಕೆಂದು ಎಂದು ಹೇಳಿ ಮತ್ತೊಮ್ಮೆ ತಮ್ಮೆಲ್ಲರಿಗೂ ವಂದಿಸಿ ಬಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

ವಿಷಯ:-ಬಾಲಬ್ರೂಯಿಯಲ್ಲಿ ಮಧ್ಯರಾತ್ರಿ ಕಡತಗಳನ್ನು ತೆಗೆದುಕೊಂಡು ಹೋಗಿ ಚರ್ಚೆ ನಡೆಸಿರುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೇ ಈಗಾಗಲೇ ಒಂದು ನಿಲುವಳಿ ಸೂಚನೆ ಮೂಲಕವೇ ಪ್ರಸ್ತಾಪ ಮಾಡುವಂತಹ ವಿಷಯವನ್ನು ಅದಕ್ಕೆ ಎಳೆಯದೆಯೇ ಇವತ್ತೇನು ಬಾಲಬ್ರೂಯಿಯಲ್ಲಿ ಈ ಅತಿಥಿ ಗೃಹದಲ್ಲಿ ಮಧ್ಯರಾತ್ರಿಯವರೆಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಇತರೆ ಸಚಿವರು ಅಲ್ಲಿ ಗೌಡರ ಬಳಿಗೆ ಓಡಿದ ಒಂದು ಸರ್ಕಾರ ಎನ್ನುವ ಶೀರ್ಷಿಕೆಯಲ್ಲಿ ಅನೇಕ ವಿಷಯಗಳು ಇವತ್ತು ಪ್ರಕಟ ಆಗಿದೆ. ನಾನು ಒಂದೇ ಒಂದು ವಿನಂತಿಯನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮಾಡುತ್ತೇನೆ. ಇವತ್ತು ಖಾಸಗಿ ಕಾರುಗಳಲ್ಲಿ ಸಚಿವರು. ಅಧಿಕಾರಿಗಳೂ ಫೈಲನ್ನು ಹೊತ್ತುಕೊಂಡು ಗೌಡರ ಮುಂದೆ ಹೋಗಿ ಕುಳಿತುಕೊಳ್ಳುವಂತಹ ಪರಿಸ್ಥಿತಿ ಏನು ಇತ್ತು? ಗೌಡರು ಒಂದೊಂದು ಕಡತವನ್ನು ತಿರುವಿ ಹಾಕಿದಂತಹ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು. ಕೈಗಾರಿಕಾ ಸಚಿವರು ಮುಖ್ಯ ಕಾರ್ಯದರ್ಶಿಯವರಾದ ಶ್ರೀ ಮಿಶ್ರಾ ಅವರು ಕೈಕಟ್ಟಿಕೊಂಡು ಗಾಬರಿ ಮಾಡಿಕೊಂಡು ನಿಂತಿದ್ದರು ಎನ್ನುವಂತಹ ಒಂದು ವಿಚಾರ ಇದೆ. ಈ ರೀತಿಯ ಪರಿಸ್ಥಿತಿಗಳು ಬಂದು, ಪತ್ರಕರ್ತರು ಸಹ ಅತಿಥಿ ಗೃಹದ ಸಮೀಪ ಹೋಗುವುದಕ್ಕೆ ಆಗದಿರುವಂತಹ ಪರಿಸ್ಥಿತಿ ಆಯಿತು. ಅಧಿಕಾರಿಗಳ ವಾಹನ ಸಾಲಾಗಿ ನಿಂತಿರತಕ್ಕಂಥದ್ದು ಈ ಕನಕಪುರ-ಸಾತನೂರು ಪ್ರದೇಶದಲ್ಲಿ ಯಾವುದೋ ಒಂದು ಹೊಸ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಹೊರಟಿರುವಂತಹದು. ಅದಕ್ಕೆ ಆಗಿರುವಂತಹ ಗೊಂದಲ. ಈ ಬಿಎಂಐಸಿ ಯೋಜನೆಯೇ ಈ ಗೊಂದಲಕ್ಕೆ ಕಾರಣ. ಇದೆಲ್ಲವೂ ಸಹಿತ ಪತ್ರಿಕೆಯಲ್ಲಿ ಬಂದಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನಿಮ್ಮ ಹೈಕಮ್ಯಾಂಡ್ ಆದೇಶದ ಮೇರೆಗೆ ಖಾಸಗಿ ಕಂಪನಿಗೆ ಮತ್ತು...

ಶ್ರೀ ಎನ್. ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು):- ಈಗ ನಾನು ಆ ಮನೆಗೆ ಹೋಗುತ್ತಿದ್ದೇನೆ. ಮಾನ್ಯ ಸಿಂಧ್ಯಾರವರು ಈಗ ಉತ್ತರ ಕೊಡುತ್ತಾರೆ. ಆದರೂ ಕೂಡ ಒಂದು ಮಾತನ್ನು ಹೇಳುತ್ತಿದ್ದೇನೆ. ತಾವು ವಿರೋಧ ಪಕ್ಷದ ನಾಯಕರು. ಇವತ್ತು ಆ ವಿಚಾರವನ್ನೇನು ಪ್ರಸ್ತಾಪ ಮಾಡಿದ್ದೀರಿ. ನಾನು ರಾಜ್ಯದ

ಮುಖ್ಯಮಂತ್ರಿ ಆಗಿದ್ದೇನೆ. ಅವರು ಲೋಕಸಭಾ ಸದಸ್ಯರಾಗಿದ್ದಾರೆ. ಸಮ್ಮಿಶ್ರ ಸರ್ಕಾರ ರಾಜ್ಯದಲ್ಲಿದೆ. ಇವತ್ತು ಮಾನ್ಯ ದೇವೇಗೌಡರು ಜೆಡಿ (ಎಸ್)ನ ಅಧ್ಯಕ್ಷರು. ನಾವು ರಾಜಕೀಯವಾಗಿ ಚರ್ಚೆಮಾಡಲೇ ಬೇಕು. ನಾವು ಎಲ್ಲೋ ಅಂಡರ್‌ಗ್ರೌಂಡ್‌ಗೆ ಹೋಗಿ ರಹಸ್ಯವಾಗಿ ಚರ್ಚೆ ಮಾಡಿಲ್ಲ. ಒಂದು ಮಾತು ಹೇಳುತ್ತೇನೆ. ರಾಜ್ಯದ ಮುಖ್ಯಮಂತ್ರಿಯಾಗಿ ನಾವು ಹೋಗಿ ಅವರ ಮನೆಯಲ್ಲಿ ಚರ್ಚೆ ಮಾಡಿಲ್ಲ. ಮತ್ತೊಂದು ಮನೆಯಲ್ಲಿ ಚರ್ಚೆಮಾಡಿಲ್ಲ. ಬಾಲಬ್ರೂಯಿಯಲ್ಲಿ ಚರ್ಚೆ ಮಾಡಿದ್ದೇವೆ. ಎಲ್ಲಿ ದೇವರಾಜ ಅರಸ ಅವರ ನಿವಾಸ. ಶ್ರೀ ಎಸ್. ಆರ್. ಬೊಮ್ಮಾಯಿಯವರ ಅಧಿಕೃತ ಸ್ಥಾನ. ಇವತ್ತು ಗೆಸ್ಟ್ ಹೌಸ್‌ಗೆ ಬಂದಿದ್ದಾರೆ. ಬಹಳಷ್ಟು ಪ್ರಮುಖ ವಿಚಾರದಲ್ಲಿ ಮಾತನಾಡಿದ್ದೇವೆ. ಅಲ್ಲೆ ನಾನೂ ಇದ್ದೇನು. ಮಾನ್ಯ ಸಿಂಧ್ಯಾ ಅವರು ಇದ್ದಾರೆ. ಚೀಫ್ ಸೆಕ್ರೆಟರಿ ಇದ್ದಾರೆ. ನಮ್ಮ ಸೆಕ್ರೆಟರಿಗಳು ಇದ್ದಾರೆ. ಯಾವುದೂ ಕೂಡ ಈ ರಾಜ್ಯದ ಜನತೆಗೆ ಹೇಳುತ್ತಿದ್ದೇನೆ. ಇವತ್ತು ಈ ಸದನದಲ್ಲಿ ಫೈಲ್ ಎತ್ತಿಕೊಂಡು ಹೋಗಿ ಆದೇಶ ಮಾಡತಕ್ಕಂಥ ಮುಖ್ಯಮಂತ್ರಿ ನಾನಲ್ಲ. ನಾನು ಯಾರ ಕೈಗೊಂಬೆಗಳೂ ಕೂಡ ಅಲ್ಲ ನಾವು ಸರ್ಕಾರವನ್ನು ನಡೆಸುತ್ತಿದ್ದೇವೆ. ಇದಕ್ಕೆ ಯಾವ ತರಹದ ಸಂಶಯವು ಮಾಡಬೇಡಿ. ಇವತ್ತು ಎಷ್ಟೋ ಮಂದಿ ಸಾರ್ವಜನಿಕರ ಜೊತೆಯಲ್ಲಿ ಚರ್ಚೆ ಮಾಡುತ್ತೇವೆ. ತಾವು ಬಂದಾಗಲೂ ಕೂಡ ಅಧಿಕಾರಿಗಳನ್ನು ಕರೆಸುತ್ತೇವೆ. ಅಧಿಕಾರಿಗಳನ್ನು ಮಾತ್ರ ಕರೆಸುತ್ತಿಲ್ಲ. ರಾಜ್ಯದ ಒಬ್ಬ ಮುಖಂಡರು ಇದ್ದಾರೆ. ಸಮ್ಮಿಶ್ರ ಸರ್ಕಾರದ ಹಿರಿಯರು ಇದ್ದಾರೆ. ಇವತ್ತು ನಾವು ಮಾತುಕತೆ ಆಡಿದ್ದೇವೆ. ಮಾತುಕತೆ ಆಗಿ ಎಲ್ಲಿ ಕೋರ್ಟಿನಲ್ಲಿರತಕ್ಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡತಕ್ಕದ್ದು ಅವಶ್ಯಕತೆ ಇಲ್ಲ. ನಾವು ಮಾಡಿಲ್ಲ. ಅದಕ್ಕೆ ಸಂಶಯ ಪಡತಕ್ಕಂಥ ಕಾರಣ ಇಲ್ಲ. ಪತ್ರಿಕೆಯಲ್ಲಿ ಬಂದಿದೆ. ತಾವು ವಿರೋಧ ಪಕ್ಷದ ನಾಯಕರಾಗಿದ್ದೀರಿ. ನಮಗೆ ಕೂಡ ಅದನ್ನು ಕೇಳಬೇಕೆಂದು ಹೇಳಿ ಒತ್ತಡ ಬರುತ್ತದೆ. ಒಂದು ಮಾತು ಹೇಳುತ್ತಿದ್ದೇನೆ. ಯಾವ ತರಹದ ರಹಸ್ಯ ಮಾತಿಲ್ಲ. ನಾವು ಎಷ್ಟೊ ಸಲ ಚರ್ಚೆ ಮಾಡುತ್ತೇವೆ. ಚರ್ಚೆ ಮಾಡಲೇ ಬೇಕಾಗುತ್ತದೆ. ಡೆಮಾಕ್ರಸಿ ಸೆಟಪ್‌ನಲ್ಲಿ ಪ್ರಜಾಪ್ರಭುತ್ವದಲ್ಲಿ ಎರಡೂ ರಾಜಕೀಯ ಪಕ್ಷಗಳು ಒಂದಾಗಿಯೇ ಕೆಲಸ ಮಾಡತಕ್ಕ ಕಾಲದಲ್ಲಿ ಮಾತನಾಡ ಬೇಕಾಗುತ್ತದೆ ಅಷ್ಟೇ.

ಶ್ರೀ ಕೆ.ಎಸ್.ಈಶ್ವರಪ್ಪ: ಹಾಗಾದರೆ. ಒಂದು ಸಂವಿಧಾನ ರಚಿಸುವ ಮೂಲಕ ಕರ್ನಾಟಕ ರಾಜ್ಯಕ್ಕೆ ಒಬ್ಬ ಸೂಪರ್ ಮುಖ್ಯಮಂತ್ರಿಯನ್ನು ಮಾಡಿಬಿಡಿ!

ಶ್ರೀ ಧರ್ಮಸಿಂಗ್: ನೀವು ಹಾಗೇ ಹೇಳಿಕೊಂಡು ಹೋಗಿ. ಈಶ್ವರಪ್ಪನವರೆ. ನಿಮಗೆ ಒಂದು ರೀತಿಯ ಭ್ರಮೆಯುಂಟಾಗಿದೆ.

ಶ್ರೀ ಕೆ.ಎಸ್.ಈಶ್ವರಪ್ಪ: ಅಧಿಕಾರಿಗಳಾದವರು ಈ ಮುಖ್ಯಮಂತ್ರಿಗಳು ಹೇಳಿದಂತೆ ಕೆಲಸ ಮಾಡಬೇಕೇ ವಿನಾ ಸೂಪರ್ ಮುಖ್ಯಮಂತ್ರಿಗಳ ಅಧೀನದಲ್ಲಿ ಕೆಲಸ ಮಾಡುವಂತಿಲ್ಲ. ಅಧಿಕಾರಿಗಳು ಇವರ ಗುಲಾಮರಲ್ಲ. ಅಧಿಕಾರಿಗಳೆಲ್ಲರನ್ನು ಕರೆದುಕೊಂಡು ಹೋಗುವುದರಲ್ಲಿ ಅರ್ಥವಿಲ್ಲ.

(ಗದ್ದಲ)

ಶ್ರೀ ಎಸ್.ಎಸ್.ಪಾಟೀಲ್: ಅವರು ಒಂದು ರಾಷ್ಟ್ರೀಯ ಪಕ್ಷದ ಅಧ್ಯಕ್ಷರಾಗಿದ್ದಾರೆ. ಇದರಲ್ಲಿ ಏನು ತಪ್ಪಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೆ. ಬಹಳ ಮುಖ್ಯವಾದ ಸಂಗತಿಯೇನೆಂದರೆ. ಈ ಎಲ್ಲಾ ಘಟನೆಗಳನ್ನು ಗಮನಿಸಿದಾಗ ನಾಡಿನ ಜನರ ಆಸ್ತಿ–ಪಾಸ್ತಿಗಳಿಗೆ ನಿಮ್ಮಿಂದ ರಕ್ಷಣೆಯಿಲ್ಲದಂತಾಗಿದೆ. ರಾತ್ರೋರಾತ್ರಿ ಯಾವ್ಯಾವ ಕಡತಗಳಿಗೆ ಸಹಿ ಮಾಡಿದಿರಿ? ಯಾರನ್ನು ತೃಪ್ತಿಪಡಿಸುವುದಕ್ಕೆ ಸಹಿ ಮಾಡಿದಿರಿ? ಆ ಕಡತಗಳ ಮೇಲೆ ಏನೆಂದು ಆದೇಶವಾಯಿತು? ಇದನ್ನು ಮಂಡಿಸಿ. ನಿಮ್ಮ ಕೊಠಡಿಗೆ ಬಂದಾಗ ಅದನ್ನು ನೋಡೋಣ. ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಂಡಿರುವ ನನ್ನ ಚಿಂತೆಯೇನೆಂದರೆ. ಯಾವುದೋ ಒತ್ತಡಕ್ಕೆ ಮಣಿದು ಯಾರಿಗೋ ಅನುಕೂಲವಾಗುವ ರೀತಿಯಲ್ಲಿ ತೀರ್ಮಾನ ತೆಗೆದುಕೊಳ್ಳುವಂತಾದ್ದು ಮತ್ತು ಹೈಕಮಾಂಡ್ ಆದೇಶದ ಮೇರೆಗೆ ಖಾಸಗಿ ಕಂಪನಿಗೆ ಮತ್ತೆ ಭೂಮಿಯನ್ನು ಪರಭಾರೆ ಮಾಡಿ ಆದೇಶ ಹೊರಡಿಸಿದರು. ಆ ಬಗ್ಗೆ ಅವರು ಆಕ್ರೋಶಗೊಂಡರು. ಮತ್ತೆ 'ನಾನು ಯಾವ ಜಮೀನನ್ನು ಪರಭಾರೆ ಮಾಡಬೇಕು. ಇಂತಹವರಿಗೆ ಕೊಡಬೇಕೆಂದು ಹೇಳಿದಂತೆ ಮಾಡದೇ ನಿಮಗೆ ಖುಷಿ ಬಂದಂತೆ ನೀವು ಮಾಡಿಕೊಂಡಿರಿ'. ಕೈಗಾರಿಕೆ ಸಚಿವರು ಯಾವುದೋ ಹತ್ತು ಎಕರೆ ಜಮೀನನ್ನು ಯಾರಿಗೋ ಮಾಡಿಕೊಟ್ಟರು. ರಾತ್ರೋರಾತ್ರಿ ಅವರು ಓಡಿ ಬಂದು ಕ್ಷಮಾಪಣೆ ಕೇಳಿಕೊಂಡರು ಅಥವಾ ಅವರು ಬಂದು. 'ಇಲ್ಲ ಈ ರೀತಿಯಾಗಿದೆ'ಯೆಂದು ಅವರ ಮುಂದೆ ಕೈಕಟ್ಟಿ ನಿಂತುಕೊಂಡಿದ್ದರು. ಈ ತರಹ ಸಂಗತಿಗಳು ಬಂದಿವೆ. ಪತ್ರಿಕೆಗಳಲ್ಲಿ ಏನು ಬಂದಿದೆಯೋ. ಅದರ ಆಧಾರದ ಮೇಲೆ ನಾನು ಮಾತನಾಡುತ್ತಿದ್ದೇನೆ. ನಾನು ಮಾತನಾಡುತ್ತಿರುವುದು. ಕಳೆದ ಹತ್ತು ತಿಂಗಳುಗಳಲ್ಲಿ ಉಸಿರು ಕಟ್ಟುವಂಥ ವಾತಾವರಣದಲ್ಲಿ ನೀವು ಆಡಳಿತ ನಡೆಸಿಕೊಂಡು ಬಂದಿರಿ. ಇವೊತ್ತು ಇಂತಹ ಘಟನೆಗಳನ್ನು ನೋಡಿದರೆ. ಬಹುಶಃ ಈ ರಾಜ್ಯದಲ್ಲಿ ಮತ್ತೊಮ್ಮೆ ಉಪ ಚುನಾವಣೆ ಅನಿವಾರ್ಯ ಎನ್ನುವ ವಾತಾವರಣ ಬಂದಿದೆ. ಇಂತಹ

ಸಂದರ್ಭದಲ್ಲಿ ಜನರು ಮಾತನಾಡುತ್ತಾರೆ. ಹಿರಿಯರಾದ ಸಿಂಧ್ಯಾರವರು ಏನೆಂದುಕೊಳ್ಳುತ್ತಾರೋ ಗೊತ್ತಿಲ್ಲ. ಇವೊತ್ತು ಎರಡು ಗುಂಪಿನ ಪಕ್ಷದ ನಾಯಕರುಗಳು ನೂರಾರು ಕೋಟಿ ರೂಪಾಯಿಗಳನ್ನು ಮಾಡಿಕೊಂಡು ಚುನಾವಣೆಯ ಸಿದ್ಧತೆಯಲ್ಲಿದ್ದಾರೆ. ಇನ್ನೂ ಕೆಲವು ದಿವಸ ಸಮಯ ಕೊಟ್ಟಲ್ಲಿ ಇನ್ನಷ್ಟು ದುಡ್ಡು ಮಾಡುವುದಕ್ಕೆ ಅವಕಾಶವಾಗಬಹುದು ಎನ್ನುವ ಮಾತು ಜನರ ಬಾಯಲ್ಲಿ ಕೇಳಿಬರುತ್ತಿರುವ ಸಂದರ್ಭದಲ್ಲಿ ಅದಕ್ಕೆ ಪೂರಕವಾಗುವ ರೀತಿಯಲ್ಲಿ ಅನುಮಾನ ಬರುವ ರೀತಿಯಲ್ಲಿ ಸರ್ಕಾರದ ವರ್ತನೆಯಾಗಬಾರದೆಂಬುದು ನಮ್ಮ ಭಾವನೆಯಾಗಿದೆ. ನಿಮಗೆ ಸ್ವಾತಂತ್ರ್ಯವಿದೆ. ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರವಿರುವಾಗ ನಿಮ್ಮ ಮಾಜಿ ಪ್ರಧಾನಿ. ಹಿರಿಯ ಮುಖಂಡರ ಜೊತೆ ರಾತ್ರೋರಾತ್ರಿ ಸಮಾಲೋಚನೆ ನಡೆಸುವುದಕ್ಕೆ ನಮ್ಮ ಅಭ್ಯಂತರವಿದೆಯೆಂದು ಹೇಳುತ್ತಿಲ್ಲ. ಆದರೆ ನಿನ್ನೆ ನಡೆದ ಘಟನೆಗಳು ಮತ್ತು ಯಾವುದೋ ಒಂದು ಸಂದರ್ಭದಲ್ಲಿ ಅಧಿಕಾರಿಗಳು ಬಾಲಬ್ರೂಯಿಗೆ ಹೋಗಿ ಅಪರಾಧಿಗಳಂತೆ ಸಾಲಾಗಿ ಕಡತಗಳನ್ನು ಹಿಡಿದುಕೊಂಡು ನಿಂತುಕೊಳ್ಳುವಂತಾದ್ದು ಅವರು ಎಲ್ಲಾ ಕಡತಗಳನ್ನು ತೆಗೆದು ನೋಡಿ ತೀರ್ಮಾನ ಕೈಗೊಳ್ಳುವ ಮಟ್ಟಕ್ಕೆ ಬಂದಿರುವುದು ಯಾರಿಗೂ ಶೋಭೆ ತರುವಂತಾದ್ದು ಎಂದು ನನಗಂತೂ ಅನಿಸುವುದಿಲ್ಲ. ಈ ಹಿನ್ನೆಲೆಯಲ್ಲಿ ನಾನು ತಮ್ಮನ್ನು ಒತ್ತಾಯಿಸುವುದೆಂದರೆ ವಾಸ್ತವಿಕವಾಗಿ ಅಲ್ಲಿ ನಡೆದ ಘಟನೆಗಳೇನು? ನೀವು ಅಪರಾಧ ಮಾಡಿದ್ದೀರಾ? ಅಥವಾ ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ಆಸ್ತಿ-ಪಾಸ್ತಿಯನ್ನು ಯಾರಿಗಾದರೂ ಪರಭಾರೆ ಮಾಡುವಂಥ ಪ್ರಯತ್ನದಲ್ಲಿದ್ದಿರಾ? ಅದನ್ನು ಗೌಡರು ತಡೆದರೆ? ಅಥವಾ 'ಅವರಿಗೆ ಬೇಕಾದ್ದು ಅವರು ಮಾಡಿಕೊಳ್ಳಲಿ. ನಿಮಗೆ ಬೇಕಾದ್ದು ನೀವು ಮಾಡಿಕೊಳ್ಳಿ' ಎಂದು ಏನಾದರೂ ಒಂದು ಒಪ್ಪಂದಕ್ಕೆ ರಾತ್ರೋರಾತ್ರಿ ಬಂದಿರಾ? ಈ ಅನುಮಾನಗಳು ಸಹಜವಾಗಿ ನಾಡಿನ ಜನರನ್ನು ಕಾಡುತ್ತಿದೆ. ಒಂದು ವಿರೋಧ ಪಕ್ಷವಾಗಿ ಸದನ ನಡೆಯುವಂಥ ಸಂದರ್ಭದಲ್ಲಿ ಈ ರೀತಿ ರಾತ್ರೋರಾತ್ರಿ ಕಡತಗಳನ್ನು ಹೊತ್ತುಕೊಂಡು ಭಯಾನಕ ವಾತಾವರಣವುಂಟಾಗಿ ಪತ್ರಕರ್ತ ಸ್ನೇಹಿತರು ಯಾರೂ ಸುಳಿಯುವಂತಿಲ್ಲ. ಅಧಿಕಾರಿಗಳೆಲ್ಲರೂ ಸಾಲುಗಟ್ಟಿ ನಿಂತಿರುವಂತಾದ್ದು. ನಮ್ಮ ಮಂತ್ರಿಗಳು ಖಾಸಗಿ ವಾಹನದಲ್ಲಿ ಹೋಗಿರುವಂಥಾದ್ದು ಪತ್ರಿಕೆಗಳಲ್ಲಿ ಬರೆದಿರುವಂಥ ನೂರಕ್ಕೆ 90 ಭಾಗ ಸತ್ಯಾಂಶವಿರುವುದರಿಂದ ನಾನು ಉಪಾಧ್ಯಕ್ಷರಲ್ಲಿ ವಿನಂತಿಸಿಕೊಂಡು ಸರ್ಕಾರಕ್ಕೆ ಒತ್ತಾಯಿಸುವುದೇನೆಂದರೆ ದಯಮಾಡಿ ನಿನ್ನೆ ನಡೆದ ಯಾವುದೇ ಘಟನೆಯನ್ನು ನೀವು ಮುಚ್ಚಿಟ್ಟರೂ, ಅದರ ಸತ್ಯವೇನೆಂದು ಇವೊತ್ತಲ್ಲ ನಾಳೆ ಹೊರಗಡೆ ಬಂದೇ ಬರುತ್ತದೆ. ಯಾವ ವ್ಯವಹಾರದಲ್ಲಿ ನಿಮಗೂ ಅವರಿಗೂ ಭಿನ್ನಾಭಿಪ್ರಾಯಗಳುಂಟಾದವು? ರಾಜ್ಯದ ಜನರೊಂದಿಗೆ ಈ ರೀತಿ

ಚೆಲ್ಲಾಟವಾಡುವುದು ಸರಿಯೇ? ಅಭದ್ರತೆ ನಿರ್ಮಿಸುವುದು ಸರಿಯೇ? ಇಂತಹ ಉಸಿರುಗಟ್ಟಿಸುವ ಸಂದರ್ಭದಲ್ಲಿ ಅಧಿಕಾರಿಗಳು ಧೈರ್ಯವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವೇ? ಇದು ನಮ್ಮನ್ನು ಕಾಡುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಗೆ ಹೋಗಿದ್ದಾರೆ. ಆದರೆ, ನಾನು ಒಂದೇ ಒತ್ತಾಯ ಮಾಡುವುದೇನೆಂದರೆ ಬಹುಶಃ ಈ ನಾಡಿನ ಜನರು ಇಂತಹ ವ್ಯವಸ್ಥೆ ನೋಡಿ ಬೇಸತ್ತಿದ್ದಾರೆ. ನಾವು ಪ್ರತಿಪಕ್ಷದಲ್ಲಿ ಕುಳಿತುಕೊಂಡು ಯಾವುದೋ ಸಹಕಾರ ಕೊಟ್ಟು ಆಡಳಿತ ಮುಂದುವರೆಯಲಿ ಎಂದರೂ ಸಹ ನೀವು ಅಧಿಕಾರದಲ್ಲಿ ಮುಂದುವರಿಯುವ ವಾತಾವರಣ ಕಾಣುತ್ತಿಲ್ಲ. ಅದಕ್ಕೋಸ್ಕರ. ನಾನು ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತಿದ್ದೇವೆ. ಇಂತಹ ಉಸಿರುಗಟ್ಟುವಂಥ ಪರಿಸ್ಥಿತಿಯಲ್ಲಿ ನೀವು ಅಧಿಕಾರದಲ್ಲಿ ಮುಂದುವರೆಯುವ ನೈತಿಕ ಹಕ್ಕು ಕಳೆದುಕೊಂಡಿದ್ದೀರಿ. ಕರ್ನಾಟಕ ರಾಜ್ಯದ ಹಿತವನ್ನು ನೀವು ಕಾಪಾಡಬಹುದೆಂಬ ವಿಶ್ವಾಸ ನಮಗಿಲ್ಲ ನಮ್ಮ ಆಸ್ತಿ-ಪಾಸ್ತಿಗೆ ಧಕ್ಕೆ ಬರಬಹುದೆನ್ನುವ ಭಯ ನಮ್ಮನ್ನು ಕಾಡುತ್ತಿದೆ. ಕಳೆದ ಏಳೆಂಟು ತಿಂಗಳುಗಳಲ್ಲಿ ನಡೆದಿರುವ ಇದೇ ವ್ಯವಹಾರಗಳಿಂದಾಗಿ ನೀವು ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ಅವಕಾಶ ನೀಡಲು ನಾವ್ಯಾರು ಸಿದ್ಧವಿಲ್ಲ. ಅದಕ್ಕೋಸ್ಕರ ನಾನು ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತಿದ್ದೇನೆ. ದಯಮಾಡಿ ನಿಮ್ಮ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ನಿಮಗೆ ಆಡಳಿತ ನಡೆಸುವಂಥ ಶಕ್ತಿ ಇಲ್ಲವೆಂದರೆ ಮುಂದಿನ ವ್ಯವಸ್ಥೆಗೆ ದಾರಿ ಮಾಡಿಕೊಡಬೇಕು. ಈ ರೀತಿಯ ಘಟನೆಗಳನ್ನು ಸುಮ್ಮನೆ ನೋಡಿ ಸಹಿಸಿಕೊಂಡು ಕುಳಿತುಕೊಳ್ಳುವುದಕ್ಕೆ ನಾವು ಸಿದ್ದರಿಲ್ಲವೆಂಬ ಮಾತನ್ನು ಹೇಳುತ್ತಿದ್ದೇನೆ. ನೀವು ಇದಕ್ಕೆ ಉತ್ತರ ಕೊಟ್ಟ ನಂತರ ಇನ್ನೂ ಕೆಲವು ಸಂಗತಿಗಳನ್ನು ನಾನು ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಉಪಾಧ್ಯಕ್ಷರೇ. ಈಗ ತಾವು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದೀರಿ. ನಾನು ಸದನಕ್ಕೆ ತಡವಾಗಿ ಬಂದೆ. ನಿಮಗೆ ಅಭಿನಂದನೆಗಳನ್ನು ಸಲ್ಲಿಸುವುದಕ್ಕಾಗಲಿಲ್ಲ ಆದುದರಿಂದ, ಮೊದಲನೆಯದಾಗಿ, ನಾನು ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ ಹಾಗಲ್ಲ. ನೀವು ಉತ್ತರ ಕೊಡುವಂಥ ಸಂದರ್ಭದಲ್ಲಿ ಕೇಳಿಕೊಂಡು ಉತ್ತರ ಕೊಡಿ.

ಉಪಾಧ್ಯಕ್ಷರು: ಅವರು ನನಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದಾರೆ.

(ವಿರೋಧ ಪಕ್ಷದ ಸದಸ್ಯರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಎದ್ದು ನಿಂತು ಮಾತನಾಡಿದ್ದು ಕೇಳಿಸಲಿಲ್ಲ.)

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನೀವು ಮಾತನಾಡಿ. ನಮ್ಮದೇನು ತಕರಾರಿಲ್ಲ. ನೀವು ವಿರೋಧ ಪಕ್ಷದ ನಾಯಕರಾಗಿದ್ದವರು. ನೀವು ಮಾತನಾಡುವುದಕ್ಕೆ ಅಡ್ಡಿಪಡಿಸುವುದಿಲ್ಲ. ಸದಸ್ಯರಾದ ವಾಟಾಳ್ ನಾಗರಾಜ್. ಕೆ.ಎಸ್.ಈಶ್ವರಪ್ಪ. ಜಗದೀಶ್ ಶೆಟ್ಟರ್ ಇವರುಗಳು ಮಾತನಾಡುವುದಕ್ಕೆ ತಕರಾರಿಲ್ಲ.

(ವಿರೋಧ ಪಕ್ಷದ ಸದಸ್ಯರಾದ ಶ್ರೀ ಕೆ.ಎಸ್.ಈಶ್ವರಪ್ಪನವರು ಎದ್ದು ನಿಂತು ಮಾತನಾಡಿದ್ದು ಕೇಳಿಸಲಿಲ್ಲ)

ಉಪಾಧ್ಯಕ್ಷರು: ಈಶ್ವರಪ್ಪನವರೆ. ಮಾನ್ಯ ಸಚಿವರು ಏನು ಮಾತನಾಡುತ್ತಾರೆಂದು ಕೇಳೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬೇಕೆಂದು ನಾನು ಇವೊತ್ತು ತಯಾರಾಗಿ ಬಂದಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಪ್ರಸ್ತಾಪಿಸಿರತಕ್ಕ ವಿಷಯ ನನಗೆ ತಿಳಿದು ಬಂದಿದೆ. ಅದು ಅವರ ಕರ್ತವ್ಯ ಮತ್ತು ಹಕ್ಕು ಅವರು ಕೇಳುವ ಎಲ್ಲಾ ಪ್ರಶ್ನೆ ವಿಚಾರಗಳಿಗೂ ಸಹ ಸರಿಯಾದ ಉತ್ತರ ನೀಡುವುದು ಸಂಸದೀಯ ಕಾರ್ಯಕಲಾಪಗಳ ಲಕ್ಷಣ. ಮಾನ್ಯ ಉಪಾಧ್ಯಕ್ಷರೆ ನಾನು ನಿಮಗೆ ಕೇಳುತ್ತಿದ್ದೇನೆ. ಈಗ ವರದಿಗಳನ್ನು ಒಪ್ಪಿಸಲಾಗಿದೆ. ತಮ್ಮನ್ನು ಈ ಸದನದ ಉಪಾಧ್ಯಕ್ಷರನ್ನಾಗಿ ಚುನಾವಣೆ ಮಾಡತಕ್ಕಂಥ ಪ್ರಕ್ರಿಯೆ ಕಾರ್ಯಕ್ರಮಗಳ ಪಟ್ಟಿ ಪ್ರಕಾರ ಜರುಗಿದೆ. ಇದಾದ ನಂತರ ವಿತ್ತೀಯ ಕಾರ್ಯಕಲಾಪಗಳು ಇದೆ. ಇದನ್ನು ತಡೆಹಿಡಿದು ಶೂನ್ಯ ವೇಳೆಗೆ ಅವಕಾಶ ಮಾಡಿಕೊಟ್ಟರೆ ನನ್ನದೇನೂ ತಕರಾರಿಲ್ಲ. ಶೂನ್ಯ ವೇಳೆ ಸಾಮಾನ್ಯವಾಗಿ ಪ್ರಶ್ನೋತ್ತರವಾದ ನಂತರ ಬರುತ್ತದೆ. ನೀವು ಅದನ್ನು ತಡೆಹಿಡಿದು ಅವಕಾಶ ಕಲ್ಪಿಸುವುದರಿಂದ ಅವರೆಲ್ಲರೂ ಮಾತನಾಡಲಿ. ನನ್ನದೇನೂ ತಕರಾರಲ್ಲ. ಅವರು ಕೇಳತಕ್ಕಂಥ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುವುದಕ್ಕೆ.... ಏಕೆಂದರೆ. ಇದು ಮತ್ತೆ ಬೆಳಿಗ್ಗೆ ಆವೃತ್ತಿಯ ಪತ್ರಿಕೆಗಳಿಗೆ ಹೊರಟು ಹೋಗುತ್ತದೆ. ನಿಮಗೆ ಸಂಜೆ 5–6 ಗಂಟೆಗೆ ನಾವು ಉತ್ತರ ಕೊಟ್ಟರೆ ಅದು ಪತ್ರಿಕೆಗಳಲ್ಲಿ ಪ್ರಕಟವಾಗುವುದಿಲ್ಲ. ಅದು one sided ಆಗುತ್ತದೆ. ಆದಕಾರಣ. ಅವರು ಪ್ರಸ್ತಾಪಿಸಿರುವುದರಿಂದ ನಮಗೂ ಉತ್ತರ ಕೊಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಉಪಾಧ್ಯಕ್ಷರೆ ಇವೊತ್ತು ನಮ್ಮ ಪಕ್ಷದ ನಮ್ಮ ಪಕ್ಷದ ನಾಯಕರಾದ ಯಡಿಯೂರಪ್ಪನವರು ಪ್ರಸ್ತಾಪಿಸಿರುವ ಅಂಶದ ಬಗ್ಗೆ ನಿನ್ನೆ ನಡೆದ ಘಟನೆಗೆ ಸ್ವಲ್ಪ ಹೋಲಿಸಿದಾಗ ಇಡೀ ರಾಜ್ಯದ ಜನತೆಗೆ ಭಯವಾಗುತ್ತಿದೆ.

ಚುನಾವಣಾ ಪೂರ್ವದಲ್ಲಿ ಇದೇ ಜೆಡಿ(ಎಸ್) ರಾಷ್ಟ್ರೀಯ ಪಕ್ಷದ ಅಧ್ಯಕ್ಷರು "ಯಾರಿಗೆ ಬಹುಮತ ಬರುತ್ತದೆಂದು ಗೊತ್ತಿಲ್ಲ. ಜೆಡಿ(ಎಸ್) ಆಗಿರುವ ನಮಗೆ ಅಧಿಕಾರ ಬರುತ್ತದೆ. ಅಧಿಕಾರ ಬಂದಾಗ ಹಿಂದಿನ ಕಾಂಗ್ರೆಸ್ ಪಕ್ಷದ ಸರ್ಕಾರ ಮಾಡಿರುವ ಎಲ್ಲಾ ಅವ್ಯವಹಾರಗಳಿಗೆ ಸಂಬಂಧಿಸಿದ ಕಡತಗಳನ್ನು ನಾನು ಬಹಿರಂಗಪಡಿಸುತ್ತೇನೆ ಮತ್ತು ತಪ್ಪಿತಸ್ಥ ಮಂತ್ರಿಗಳನ್ನು ಜೈಲಿಗೆ ಕಳುಹಿಸುತ್ತೇನೆ" ಎಂದು ತುಂಬ ಸ್ಪಷ್ಟವಾಗಿ ಹೇಳಿದ್ದರು. ಆ ರೀತಿ ಹೇಳಿದ್ದ ಅವರು. ಒಂಬತ್ತು ತಿಂಗಳಾದ ನಂತರ ರಾತ್ರೋರಾತ್ರಿ ಬಾಲಬ್ರೂಯಿಯಲ್ಲಿ ನಡೆದದ್ದು ಏನು? ಅವೊತ್ತು ಅವರು ಹೇಳಿದ್ದಂಥ ಘಟನೆಗೆ ಸಂಬಂಧಿಸಿದ ಪ್ರಕರಣಗಳನ್ನು ಮುಚ್ಚಿಹಾಕಬೇಕೆನ್ನುವ ಪ್ರಯತ್ನ ನಿನ್ನೆ ರಾತ್ರಿ ನಡೆಯಿತೇ? ಏಕೆಂದರೆ. ಇಡೀ ರಾಜ್ಯದಲ್ಲಿ ಯಾವ ವ್ಯಕ್ತಿಗಳು ಯಾರ ಮೇಲೆ ಆಪಾದನೆಗಳನ್ನು ಮಾಡಿದ್ದರೋ. ಆಪಾದನೆ ಮಾಡಿದ ವ್ಯಕ್ತಿ ಮತ್ತು ಆಪಾದಿತರು ಇಬ್ಬರೂ ಇವೊತ್ತು ಒಂದಾಗಿ ರಾಜ್ಯ ಸರ್ಕಾರವನ್ನು ನಡೆಸುತ್ತಿರುವ ಸಂದರ್ಭದಲ್ಲಿ ನಿನ್ನೆ ರಾತ್ರಿ ನಡೆದ... ನಿನ್ನೆಯ ರಾತ್ರಿ ಕರಾಳ ರಾತ್ರಿ. ಇಡೀ ರಾಜ್ಯಕ್ಕೆ ಕರಾಳ ರಾತ್ರಿಯಾಗುವುದಕ್ಕೆ ಅವಕಾಶ ಮಾಡಿಕೊಡಬೇಡಿ. ನಿಮ್ಮಿಬ್ಬರ ವೈಯಕ್ತಿಕ ಸಂಬಂಧ ನಿಮ್ಮಿಬ್ಬರ ಭ್ರಷ್ಟಾಚಾರದ ಪ್ರಯತ್ನ ಇಡೀ ರಾಜ್ಯಕ್ಕೆ ಶಾಪವಾಗುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಡಿ. ಇದಕ್ಕೋಸ್ಕರ ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿದ್ದಾರೆ. ಸನ್ಮಾನ್ಯ ಕೈಗಾರಿಕಾ ಸಚಿವರಾದ ಸಿಂಧ್ಯಾರವರು ಕೂಡ ಇವೊತ್ತು ಸಮ್ಮಿಶ್ರ ಸರ್ಕಾರದ ಮಂತ್ರಿಮಂಡಲದಲ್ಲಿದ್ದಾರೆ. ಅವರು ಇದಕ್ಕೆ ಒಂದು ಉತ್ತರ ನೀಡುವ ಮೂಲಕ ತಿಪ್ಪೆ ಸಾರಿಸುವ ಕೆಲಸವನ್ನು ದಯವಿಟ್ಟು ಮಾಡುವುದು ಬೇಡ. ಅವರು ಇಡೀ ರಾಜ್ಯಕ್ಕೆ ತಾವು ಹಿಂದೆ ಆಪಾದನೆ ಮಾಡಿದ್ದು ಖಂಡಿತಾ ಹೌದು. ಅವರು ಜೆಡಿ(ಎಸ್)ನಲ್ಲಿದ್ದ ವ್ಯಕ್ತಿ. ಇತ್ತೀಚೆಗೆ ರಾಜ್ಯದ ಎಲ್ಲಾ ಸಾರ್ವಜನಿಕ ಸಭೆಗಳಲ್ಲೂ "ಸಾಕಷ್ಟು ಭ್ರಷ್ಟಾಚಾರ ನಡೆದಿದೆ. ಇದಕ್ಕೆ ಸಂಬಂಧಿಸಿದವರನ್ನು ಜೈಲಿಗೆ ಕಳುಹಿಸುತ್ತೇವೆ. ಬಿಡುವುದಿಲ್ಲ"ವೆಂದು ಹೇಳಿಕೊಂಡು ಬಂದಿದ್ದರು. ಇದಕ್ಕೆ ಇವೊತ್ತು ಯಾರು ಉತ್ತರ ಕೊಡುತ್ತಾರೆ? ಆಪಾದಿತರು ಮತ್ತು ಆಪಾದನೆ ಮಾಡಿದವರೇ ಆಪಾದಿತರ ಪರವಾಗಿ ಉತ್ತರ ಕೊಟ್ಟರೆ ನಾವು ಹೇಗೆ ನಂಬಬೇಕು? ಅದಕ್ಕೋಸ್ಕರ. ಇದರ ಬಗ್ಗೆ ಸಿ.ಬಿ.ಐ.ನಿಂದ ತನಿಖೆ ಮಾಡಿಸಿ. ಸಿ.ಬಿ.ಐ.ನಿಂದ ತನಿಖೆ ಮಾಡಿಸಿದರೆ ಇದರಲ್ಲಿ ಎಸಗಿರುವ ಬಹಳಷ್ಟು ಭ್ರಷ್ಟಾಚಾರಗಳನ್ನು ನೀವು ತೋರಿಸದೆ ಮುಚ್ಚುಮರೆ ಮಾಡುತ್ತಿದ್ದೀರಿ. ಸಿ.ಬಿ.ಐ. ತನಿಖೆ ಮಾಡಿಸಿದರೆ ಅದರ ಮುಖಾಂತರ ಭ್ರಷ್ಟಾಚಾರ ಪ್ರಕರಣಗಳೆಲ್ಲವೂ ಹೊರಗಡೆ ಬರುತ್ತದೆ. ಆದರೆ ಇವರು ಉತ್ತರ ಕೊಡುವುದರಲ್ಲಿ ಅರ್ಥವಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ತಾವು ಹೇಳಿದ್ದನ್ನೆಲ್ಲ ಕೇಳಿಸಿಕೊಂಡು ಹೋಗುತ್ತೇವೆ ಬಿಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ನಾನು ಹೇಳುತ್ತಿಲ್ಲ. ಇವರು ಏನು ಹೇಳಿದ್ದರು ಎಂಬ ಅಂಶವನ್ನು ಮೊದಲು ಅವರು ಹೇಳಲಿ. ಚುನಾವಣಾ ಪೂರ್ವದಲ್ಲಿ ನಾನೇ ಪಿ.ಜಿ.ಆರ್. ಸಿಂಧ್ಯಾ ಜೆ.ಡಿ.ಎಸ್. ನ ನಾಯಕನಾಗಿ ರಾಜ್ಯದಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರಕ್ಕೆ ಏನೇನು ಆಪಾದನೆ ಮಾಡಿದ್ದೆ. ಈ ಪಟ್ಟಿ ಮೊದಲು ಹೇಳಲಿ. ಆ ಆಪಾದನೆಗಳನ್ನು ನಾವು ಅಧಿಕಾರಕ್ಕೆ ಬಂದ ನಂತರ ಹೇಗೆ ಮುಚ್ಚಿ ಹಾಕಿದ್ದೀರಿ ಎಂಬುದಕ್ಕೆ ರಾಜ್ಯದ ಜನಕ್ಕೆ ಕ್ಷಮೆ ಕೇಳಲಿ. ತುಂಬಾ ಸ್ಪಷ್ಟವಾಗಿ ನಾವು ಆಪಾದನೆಯನ್ನು ಮಾಡಿದ್ದೆವು. ಇವತ್ತು ಅಧಿಕಾರಕ್ಕೆ ಬಂದಿದ್ದೇವೆ. ಇವತ್ತು ನಾವೂ ಅವರು ಸೇರಿಕೊಂಡು ಇಡೀ ರಾಜ್ಯದ ಜನರ ತೆರಿಗೆಯ ಹಣವನ್ನು ಹಂಚಿಕೊಳ್ಳುತ್ತಿದ್ದೇವೆ. ಅದು ಯಾವಾಗ? ರಾತ್ರಿಹೊತ್ತು ಮಧ್ಯರಾತ್ರಿ ಬಾಲಬ್ರೂಯಿಯಲ್ಲಿ ಕುಳಿತು. ಇದೇ ಅವರು ಮಾಡುತ್ತಿರುವುದು. ರಾಜ್ಯದ ಜನತೆಯ ತೆರಿಗೆಯ ಹಣವನ್ನು ಹಿಂದೆ ಅವರು ಲೂಟಿ ಮಾಡಿದ್ದರು. ಈಗ ಇವರಿಬ್ಬರು ಸೇರಿ ಲೂಟಿ ಮಾಡಿ ಹಿಂದಿನ ಹಣ ಮತ್ತು ಈಗಿನ ಹಣ ಎರಡೂ ಹಂಚಿಕೊಳ್ಳಲು ಒಂದು ಬಾಲಬ್ರೂಯಿಯ ಕರಾಳ ರಾತ್ರಿ ಇಡೀ ರಾಜ್ಯದ ಜನತೆಗೆ ಸಾಕ್ಷಿ. ಹೀಗಾಗಿ ನಾನು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಪಿ.ಜಿ.ಆರ್. ಸಿಂಧ್ಯಾರವರು ಇರಬಹುದು. ಮಾನ್ಯ ಮುಖ್ಯಮಂತ್ರಿಯವರು ಇರಬಹುದು. ಆತ್ಮಸಾಕ್ಷಿಯಾಗಿರುವಂಥ ಮಂತ್ರಿಗಳು ನಾವು ತಪ್ಪು ಮಾಡಿದ್ದೇವೆಂದು ನೇರವಾಗಿ ರಾಜೀನಾಮೆಯನ್ನು ಕೊಟ್ಟು ಬನ್ನಿ. ಇಲ್ಲದಿದ್ದರೆ ಸಿ.ಬಿ.ಐ. ತನಿಖೆ ನಡೆಸಿ. ವಿರೋಧ ಪಕ್ಷದ ನಾಯಕರು ಮತ್ತು ನಾವೆಲ್ಲರೂ ಮಾಡುತ್ತಿರುವ ಆಪಾದನೆಗೆ ಕಳ್ಳ, ನಾನು ಕಳ್ಳ ಅಲ್ಲ ಎಂದು ಉತ್ತರವನ್ನು ಕೊಡುವಂಥ ಸ್ಥಿತಿ ಬರುತ್ತದೆ. ದಯವಿಟ್ಟು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಮುಖ್ಯಮಂತ್ರಿಯವರು ಮಂತ್ರಿಮಂಡಲಕ್ಕೆ ರಾಜೀನಾಮೆ ಕೊಟ್ಟು ವಿಸರ್ಜನೆ ಮಾಡಿಕೊಳ್ಳಲಿ ಇಲ್ಲದಿದ್ದರೆ ಸಿ.ಬಿ.ಐ. ತನಿಖೆ ಮಾಡಲಿ. ಈ ಎರಡರಲ್ಲಿ ಒಂದನ್ನು ಮಾಡುವುದನ್ನು ಬಿಟ್ಟರೆ ಇವರ ಉತ್ತರದಲ್ಲೇನೂ ಅರ್ಥವಿಲ್ಲವೆಂಬ ಮಾತನ್ನು ತಮ್ಮ ಮೂಲಕ ರಾಜ್ಯದ ಜನತೆಗೆ ಹೇಳಬೇಕಾಗುತ್ತದೆ.

ಶ್ರೀ ಜಿ.ಟಿ.ದೇವೇಗೌಡ: ಮಾನ್ಯ ಅಧ್ಯಕ್ಷರೇ ವಿರೋಧ ಪಕ್ಷದ ನಾಯಕರು ರಾಜೀನಾಮೆ ಕೊಡಿ ಎಂದು ಕೇಳುತ್ತಿದ್ದಾರೆ. ನಾವು ಎರಡೂ ಪಕ್ಷಗಳು ಸೇರಿ

ಸರ್ಕಾರವನ್ನು ರಚನೆ ಮಾಡಿರುವುದು ಇಡೀ ರಾಜ್ಯಕ್ಕೆ ಗೊತ್ತಿದೆ. ಆದರೆ. ಇವರನ್ನು ವಿರೋಧ ಪಕ್ಷವೆಂದು 70ಕ್ಕೂ ಹೆಚ್ಚು ಜನ ಶಾಸಕರನ್ನು ರಾಜ್ಯದ ಜನರು ಗೆಲ್ಲಿಸಿದರಲ್ಲಾ ನೀವು ಮೂರು ಪಕ್ಷವಾಗಿ ತಮ್ಮ ನೈತಿಕತೆಯನ್ನೇ ಕಳೆದುಕೊಂಡುಬಿಟ್ಟಿದ್ದೀರಿ. ಬಂಗಾರಪ್ಪನವರ ಪಕ್ಷ ಒಂದು. ಯಡಿಯೂರಪ್ಪನವರ ಪಕ್ಷ ಒಂದು. ಅನಂತ್‌ಕುಮಾರ್‌ರವರ ಪಕ್ಷ ಒಂದು. ಈ ರೀತಿ ವಿರೋಧ ಪಕ್ಷವೇ ಇಲ್ಲ. ಆದ್ದರಿಂದ ತಾವು ಇದನ್ನು ಕೇಳತಕ್ಕ ನೈತಿಕತೆಯೇ ಇಲ್ಲ. ನಮ್ಮದು ಹೈಕಮಾಂಡ್. ಮಾಜಿ ಪ್ರಧಾನಿಗಳು. ಮುಖ್ಯಮಂತ್ರಿಗಳಿಬ್ಬರೂ ಸೇರಿ ಚರ್ಚೆ ಮಾಡುವುದರಲ್ಲಿ ಯಾವ ಸಂಶಯವೂ ಇಲ್ಲ. ಯಾವಾಗಲೂ ಚರ್ಚೆ ಮಾಡುತ್ತಲೇ ಇರುತ್ತಾರೆ. ಹೈಕಮಾಂಡ್ ಇರುತ್ತಾರೆ. ಚರ್ಚೆ ಮಾಡುತ್ತಾರೆ. ಅದಕ್ಕೋಸ್ಕರ ಹಣವನ್ನು ಹೊಡೆದುಬಿಟ್ಟಿದ್ದಾರೆ. ದೋಚಿಕೊಂಡು ಬಿಟ್ಟಿದ್ದಾರೆಂದರೆ ಹೇಗೆ? ಏನಾದರು ಒಂದು ಅಧಿಕೃತವಾಗಿ ತೋರಿಸಿ. ಅದನ್ನು ಬಿಟ್ಟು ಈ ರೀತಿ ನಿಮ್ಮದೂ ಮತ್ತು ನಿಮ್ಮ ಬಂಡವಾಳ ಕೂಡ ರಾಜ್ಯದ ಜನತೆಗೆ ಬಹಿರಂಗವಾಗಿದೆ. ಜನತೆ ನಿಮ್ಮನ್ನು ವಿರೋಧ ಪಕ್ಷವೆಂದು ನಂಬುವುದಿಲ್ಲ. ನಿಮ್ಮ ವಿರೋಧ ಪಕ್ಷಕ್ಕೆ ನೈತಿಕತೆ ಇಲ್ಲ. ಮೊದಲು ನೀವು ರಾಜಿನಾಮೆ ಕೊಡಿ. ಆಮೇಲೆ ನಮ್ಮ ರಾಜೀನಾಮೆ ಕೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇವರು ನಮ್ಮ ಬಗ್ಗೆ ಮಾತನಾಡುವ ಹಕ್ಕೇನಿದೆ? ನಾವು ಎಲ್ಲರೂ ಒಂದಾಗಿ ಕೆಲಸ ಮಾಡುತ್ತಿದ್ದೇವೆ.

(ಗೊಂದಲ)

ಒಂದೇ ಪಕ್ಷದಲ್ಲಿ ಎರಡೆರಡು ಗುಂಪು. ದೇವೇಗೌಡರ ವಿರುದ್ದ ಎ.ಕೆ. ಸುಬ್ಬಯ್ಯ ಕೋದಂಡರಾಮಯ್ಯ ಇವರೆಲ್ಲರೂ ಹೋರಾಟ ಮಾಡುತ್ತಿದ್ದಾರೆ. ಅವರೆಲ್ಲ ದೇವೇಗೌಡರ ವಿರುದ್ಧ ಆಪಾದನೆ ಮಾಡಿ ಹೋರಾಟ ಮಾಡುತ್ತಿದ್ದಾರೆ. ಅವರ ಪಕ್ಷದ ಗತಿಯೇನಿದೆ? ತಮಗೆ ಯಾವುದೇ ನೈತಿಕ ಹಕ್ಕಿಲ್ಲ. ತಾವು ಆ ರೀತಿ ಮಾತನಾಡಬೇಡಿ. ಭಾರತೀಯ ಜನತಾ ಪಾರ್ಟಿಯಲ್ಲಿ ಎಲ್ಲರೂ ಒಂದಾಗಿ ಕೆಲಸ ಮಾಡುತ್ತಿದ್ದೇವೆ. ತಮ್ಮಂತೆ ನಮ್ಮಲ್ಲೇನು ಸಮಸ್ಯೆ ಇಲ್ಲ.

(ಗೊಂದಲ)

ಶ್ರೀ ಎನ್.ವೈ. ಬೋಸರಾಜ: ತಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಅನಂತ್‌ಕುಮಾರ್‌ರವರು ಹುಡ್ಕೋದ 1400 ಕೋಟಿ ರೂಪಾಯಿಗಳನ್ನು ದುರುಪಯೋಗ ಮಾಡಿದ್ದಾರೆ.

(ಗೊಂದಲ)

ಶ್ರೀ ಅರಗಜ್ಞಾನೇಂದ್ರ: ನಿನ್ನೆ ರಾತ್ರಿ ಫೈಲ್ಸ್‌ನ್ನು ತರಿಸಿದ್ದು ಏಕೆ? ಮುಖ್ಯಕಾರ್ಯದರ್ಶಿಯಾದಿಯಾಗಿ ಎಲ್ಲಾ ಅಧಿಕಾರಿಗಳು ಹೋಗಿ, ಇದನ್ನು ರಾಜ್ಯದ ಜನತೆಗೆ ಭಹಿರಂಗಪಡಿಸಬೇಕಾಗುತ್ತದೆ, ಏಕೆಂದರೆ ಸರಿ ರಾತ್ರಿಯಲ್ಲಿ ಸರ್ಕಾರ ನಡೆಯುವುದು ವಿಧಾನಸೌದದಲ್ಲೋ, ಎಂ.ಎಸ್. ಬಿಲ್ಡಿಂಗ್‌ನಲ್ಲೋ. ಅಥವಾ ಬೇರೆ ಎಲ್ಲೊ ನೇತ್ರತ್ವದಲ್ಲಿ ಪ್ರಸ್ ಕಾನ್‌ಫರೆನ್ಸ್‌ಲ್ಲಿ. ಹೇಳಿಕೆ ಹೇಳುವಂಥದ್ದೋ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

(ಗೊಂದಲ)

ಏಕೆಂದರೆ ಕೇಂದ್ರದಲ್ಲಿ ಪ್ರಧಾನಿಯೊಬ್ಬರು. ಫೈಲ್ ನೋಡುವವರು ಒಬ್ಬರು. ರಾಜ್ಯದಲ್ಲಿ ಮುಖ್ಯಮಂತ್ರಿಯೊಬ್ಬರು. ಫೈಲ್ ನೋಡುವವರೊಬ್ಬರು. ಇದು ವಿಚಿತ್ರವಾಗಿರತಕ್ಕ ಅಂಶ. ಈ ರಾಜ್ಯದ ಮುಖ್ಯಮಂತ್ರಿಯಾರು? ಉಪಮುಖ್ಯಮಂತ್ರಿಯಾರು? ಫೈಲನ್ನು ನೋಡುವವರು ಯಾರು? ಆದೇಶ ಕೊಡುವವರು ಯಾರು? ಎಂಬುದನ್ನು ರಾಜ್ಯದ ಜನತೆಗೆ ತಾವು ಸ್ಪಷ್ಟಪಡಿಸಬೇಕಾಗಿದೆ. ನೈತಿಕ ಅನೈತಿಕ ಪ್ರಶ್ನೆ ಬೇರೆ.

(ಗೊಂದಲ)

ಉಪಾಧ್ಯಕ್ಷರು: ದಯವಿಟ್ಟು ಮಾನ್ಯ ಸಿಂಧ್ಯಾರವರು ಉತ್ತರವನ್ನು ಹೇಳಿ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ವಾಟಾಳ್‌ನಾಗರಾಜ್‌ರವರೇನೋ ಮಾತನಾಡುತ್ತಾರೆ. ಅವರಿಗೆ ಅವಕಾಶ ಕೊಡಿ. ಹಾಗೆಯೇ ಮಾನ್ಯ ಮಾಧುಸ್ವಾಮಿಯವರಿಗೂ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಉಪಾಧ್ಯಕ್ಷರು: ಈಗ ಅವರು ಉತ್ತರ ಕೊಡುತ್ತಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಅರಗಜ್ಞಾನೇಂದ್ರ: ಉತ್ತರವನ್ನು ಕೊಡುವುದಕ್ಕಿಂತ ಮೊದಲು ನಮ್ಮ ಅನಿಸಿಕೆಗಳನ್ನು ಈ ರಾಜ್ಯದ ಜನತೆಯ ಪರವಾಗಿ ನಾವು ಹೇಳಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಉಪಾಧ್ಯಕ್ಷರೆ, ತಾವು ಶೂನ್ಯ ವೇಳೆಯಲ್ಲಿ ಅವಕಾಶ ಕೊಟ್ಟುಬಿಟ್ಟಿದ್ದೀರಿ. ನಾವು ಕಳ್ಳರು ಎಂದು ಅನ್ನಿಸಿಕೊಂಡು ಹೋಗಲು ತಯಾರಿಲ್ಲ. ಈಶ್ವರಪ್ಪನವರು ನುರಿತಂಥ ಅಧ್ಯಕ್ಷ ಸ್ಥಾನದಲ್ಲಿದ್ದಂಥವರು. ಮುಂದೆ ದೊಡ್ಡ ದೊಡ್ಡ ಸ್ಥಾನಗಳಿಗೆ ಹೋಗುವವರು. ಏಕೆ ಹೀಗೆ ಮಾತನಾಡುತ್ತಾರೆ ಎಂಬುದು ನನಗೆ ಅರ್ಥವಾಗುವುದಿಲ್ಲ.

ಉಪಾಧ್ಯಕ್ಷರು: ಉಳಿದಿರುವವರು ವಾಟಾಳ್‌ನಾಗರಾಜ್‌ರವರು ಮತ್ತು ಮಾಧುಸ್ವಾಮಿಯವರು. ಅವರು ಉತ್ತರವನ್ನು ಕೊಡುತ್ತಾರೆ. ಮಾಧುಸ್ವಾಮಿಯವರು ಮಾತನಾಡಲಿ.

ಶ್ರೀ ಎಸ್.ಎಸ್. ಪಾಟೀಲ್: ಅವರು ಮಾತನಾಡಿದ ಮೇಲೆ ನಮಗೂ ಮಾತನಾಡಲೂ ಅವಕಾಶ ಕೊಡಬೇಕು. ಅನಂತರ ಅದರ ಬಗ್ಗೆ ಉತ್ತರವಾಗಲಿ. ನಮಗೂ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಮಾಧುಸ್ವಾಮಿಯವರೆ. ತಾವು ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೆ. ನಿನ್ನೆ ಏನು ನಡೆದಿದೆ ನಿಜವಾಗಲೂ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಆಕಾಶ ಕೆಳಕ್ಕೆ ಬಿದ್ದುಹೋಗಿದೆಯೆ!

ಶ್ರೀ ಜೆ.ಸಿ. ಮಾಧುಸ್ವಾಮಿ: ಆಕಾಶ ನಿಜವಾಗಿಯೂ ಕೆಳಕ್ಕೆ ಬೀಳುವುದಿಲ್ಲವೆಂದೇ ಅದಕ್ಕೆ ಆಕಾಶ ಎಂದು ಹೆಸರಿಟ್ಟಿರುವುದು! ಅಲ್ಲಿ ಏನೂ ಇಲ್ಲದಿದ್ದನ್ನೇ ಆಕಾಶ ಎಂದು ಕರೆಯುವುದು! ನಿನ್ನೆ ಏನು ನಡೆದಿದೆ ನಿಜವಾಗಿಯೂ ಇದು ಸಂವಿಧಾನಕ್ಕೆ ಗೌರವ ಕೊಡುವವರು ನಡೆದುಕೊಳ್ಳುವ ರೀತಿಯಲ್ಲವೆಂದು ನನ್ನ ಭಾವನೆ. ಎರಡು ಪಕ್ಷಗಳು ಒಂದಾಗಿದೆ. ಸರ್ಕಾರ ಮಾಡಿದೆ. ಅವರು ಕುಳಿತುಕೊಳ್ಳಬಾರದು. ಅವರವರು ಸಮಾಲೋಚನೆ ಮಾಡಬಾರದು. ಅವರ ಸಿದ್ಧಾಂತ. ಕಾರ್ಯಕ್ರಮವನ್ನು ಚರ್ಚೆ ಮಾಡಬಾರದು ಎಂದು ನಾವ್ಯಾರು ಭಾವಿಸುವುದಿಲ್ಲ. ಆದರೆ, ರಾಜ್ಯದ ಆಡಳಿತವನ್ನು, executive ವನ್ನು ಅಧಿಕಾರೇತರರು ಕರೆಯುವುದು. ಮಾತನಾಡುವುದು ಇಡೀ ಸರ್ಕಾರಿ ಕಡತವನ್ನು ತಾವು ರಾಜ್ಯದಲ್ಲಿ ಸೀಕ್ರೆಸಿ ಆಕ್ಟ್‌ನ್ನು ಇಟ್ಟುಕೊಂಡು. ಗೌಪ್ಯತೆಯನ್ನು ಮೇನ್‌ಟೇನ್ ಮಾಡುತ್ತೇವೆಂದು ನೀವು ಪ್ರಮಾಣ ಮಾಡಿ ಎಲ್ಲವನ್ನೂ ಸಾರಾಸಗಟಾಗಿ ಯಾರು ಬೇಕೋ ಅವರು ಕುಳಿತುಕೊಂಡು ಚರ್ಚೆ ಮಾಡುವ

ಸ್ಥಿತಿ ನಿರ್ಮಾಣ ಆಗಬಾರದು. ಇವತ್ತು ಅವರು ಮಾಡಿದ್ದಾರೆ. ನಾಳೆ ನಾವು ಯಾರಾದರು ಈ ಸ್ಥಾನಗಳಿಗೆ ಹೋದಾಗ ಸಮನ್ ಮಾಡುವ ಸ್ಥಿತಿ ಬರಬಹುದು. ಬಹುಶಃ ಈ ಶಾಸನ ಸಭೆ ಆರಂಭವಾದಾಗಿನಿಂದಲೂ ನಾವು ಸಂವಿಧಾನಕ್ಕೆ ಅಪಚಾರ ಮಾಡುತ್ತಾ ಬಂದಿದ್ದೇವೆ. ಇಲ್ಲಿ ಶಾಸಕ ಅಥವಾ ಮಂತ್ರಿ ಎಂದು ಪ್ರಮಾಣ ಮಾಡುವ ಕಾಲದಿಂದ ಸಂವಿಧಾನವನ್ನು ಮೀರಿ ನಾವು ವರ್ತಿಸಿದ್ದೇವೆ. ಯಾರ್ಯಾರೋ ಹೆಸರಿನಲ್ಲಿ ಪ್ರಮಾಣ ಮಾಡಿದ್ದೇವೆ. ಯಾರ್ಯಾರೋ ಹೆಸರಿನಲ್ಲಿ ಇಲ್ಲಿ oath ನ್ನು ತೆಗೆದುಕೊಂಡಿದ್ದೇವೆ. ಮಂತ್ರಿಗಳಾಗಿ oath ನ್ನು ತೆಗೆದುಕೊಂಡಿದ್ದೇವೆ. ಇದೇನು ಶಾಸನ ಸಭೆಯೋ ಇದಕ್ಕೆ ಏನಾದರೂ ರೀತಿ ನೀತಿ ಇದೆಯೇ. ಇದು ಏನಾದರೂ ರೀತಿ ನೀತಿಯಾಗಿ ನಡೆಯುತ್ತದೆಯೇ, ಯಾರ ಹೆಸರಿನಲ್ಲಿ oath ತೆಗೆದುಕೊಳ್ಳಬೇಕು. ಯಾರ ಹೆಸರಿನಲ್ಲಿ ಪ್ರಮಾಣ ಮಾಡಬೇಕೆಂದು ಆವತ್ತೇ ನಾವೆಲ್ಲ ಇದನ್ನು ಎತ್ತಬೇಕಾಗಿತ್ತು. ಆವತ್ತೂ ಕೂಡ ಇಲ್ಲಿ ಇದ್ದರು. ನಾವು ಆಗತಾನೇ ಬಂದವರು. ಕೇಳಲು ಆಗಲಿಲ್ಲ. ಇದಕ್ಕೆ ಎಲ್ಲಾದರೂ ಒಂದು ಕಡೆ ನಿರ್ಣಯ ಮಾಡಬೇಕು. ನೀತಿ ನಿರೂಪಣೆಯನ್ನು, ಕಾರ್ಯಕ್ರಮಗಳನ್ನು ಮಾಡುವುದು ಬೇರೆ. ನಾಳೆ ನಾನು ಕರೆಯುತ್ತೇನೆ ಅಧಿಕಾರಿಗಳು ಬರಬೇಕಾಗುತ್ತದೆ. ನಾಳೆ ಬಿ.ಜೆ.ಪಿ. ಅಧ್ಯಕ್ಷರು ಬಂದು ಕರೆಯುತ್ತಾರೆ, ಅವರು ಬರಬೇಕಾಗುತ್ತದೆ. ನಾಳೆ ನಮ್ಮ ಪಾರ್ಟಿಯ ಅಧ್ಯಕ್ಷರು ಬಂದು ಎಲ್ಲಾ ಫೈಲನ್ನು ತೆಗೆದುಕೊಂಡು ಬನ್ನಿ ಎಂದರೆ ಅವರು ಬರಬೇಕಾಗುತ್ತದೆ. ಬರುವುದಿಲ್ಲವೆಂದರೆ ಏಕೆ ಬರುವುದಿಲ್ಲವೆಂದು ನಾವು ಕೇಳುತ್ತೇವೆ. ಅವರ ಪಾರ್ಟಿಯ ಅಧ್ಯಕ್ಷರೊಬ್ಬರು ಕೇಂದ್ರ ಸಚಿವರಿದ್ದಾರೆ. ಇವತ್ತಿನ ಎಂ.ಪಿ ಯಾಗಿದ್ದಾರೆ. ನಾಳೆ ಫೈಲ್ಸನ್ನು ತೆಗೆದುಕೊಂಡು ಬನ್ನಿ ಎಂದರೆ ಇವರು ತರುತ್ತಾರೆಯೇ ಎಂದು ಕೇಳಬೇಕಾಗುತ್ತದೆ. ಅವರು ಎಷ್ಟೆ ದೊಡ್ಡವರಿರಲಿ ಸಂವಿಧಾನಕ್ಕೆ ಗೌರವ ಕೊಡಬೇಕಾಗುತ್ತದೆ. ಸಂವಿಧಾನದ ಕೆಳಗೆ ಕೆಲಸ ಮಾಡಬೇಕಾಗುತ್ತದೆ. ರಾಜಕಾರಣ ಯಾರ ಆಶ್ರಯದಲ್ಲಿ ನಡೆಯುತ್ತದೊ ಯಾರ ಹಂಗಿನಲ್ಲಿ ನಡೆಯುತ್ತದೊ. ಯಾರ ಸಹಕಾರದಲ್ಲಿ ನಡೆಯುತ್ತದೊ. ಎಲ್ಲಾ ಕಾಲದಲ್ಲೂ ನಡೆದುಕೊಂಡೇ ಬಂದಿದೆ. ಆದರೆ ಅದನ್ನು ಸಾರ್ವಜನಿಕ ದೃಷ್ಟಿಯಿಂದಲಾದರು ಸಂಯಮದಿಂದ ಇಟ್ಟುಕೊಂಡು ರಾಜಕಾರಣ ಮಾಡಬೇಕಾಗಿದೆ. ಮುಖ್ಯಮಂತ್ರಿಗಳು ಅಥವಾ ನಮ್ಮ ಕೈಗಾರಿಕಾ ಮಂತ್ರಿಗಳು ಹೋಗಿ ಚರ್ಚೆ ಮಾಡಿದರೆ ನಾವ್ಯಾರೂ ತಕರಾರು ಮಾಡಲು ಆಗುವುದಿಲ್ಲ. ಅವರು ಕೇಳಲು. ಹೇಳಲು ಎಲ್ಲಾ ಹಕ್ಕು ಇದೆ. ಅವರು ಮಾಡಿಕೊಳ್ಳುತ್ತಾರೆ. ನಮ್ಮ ಅಧಿಕಾರಿಗಳನ್ನು ಸರ್ಕಾರಿ ಅಧಿಕಾರಿಗಳನ್ನು ಕಾರ್ಯದರ್ಶಿ ಮಟ್ಟದವರನ್ನು ಕರೆಸುವುದು, ಫೈಲ್ಸ್ ಇಟ್ಟುಕೊಳ್ಳುವುದು, ರಾತ್ರಿಯಲ್ಲಾ ಚರ್ಚೆ

ಮಾಡುವುದು. ಮುಖ್ಯಮಂತ್ರಿಗಳು ಬರುವುದಕ್ಕೂ ಮೊದಲೇ ಅವರು ಕಡತವನ್ನು ತೆಗೆದುಕೊಂಡು ಬಂದು ಕುಳಿತುಕೊಳ್ಳುವುದು. time fix ಆಗುವುದು ನಿಜವಾಗಿಯೂ ಗೌರವ ತರುವಂಥದಲ್ಲ ಅದು ಎಷ್ಟೆ ಘನ. ಒಳ್ಳೆಯ ಕಾರ್ಯ ಇರಬಹುದು. ಅದಕ್ಕೆ ಒಂದು ರೀತಿ ನೀತಿ ಇದೆ. ನಮಗೂ ಕೂಡ ಕೆಲವು ರೀತಿ ನೀತಿಗಳನ್ನು ಇಟ್ಟುಕೊಂಡು ಕೆಲಸ ಮಾಡುವ ದೊಡ್ಡತನ ಬೇಕು. ಇವತ್ತು ಅವರು ದೊಡ್ಡವರು. ರಾಜ್ಯದಲ್ಲಿ ಎಲ್ಲರಿಗೂ ಮಾರ್ಗದರ್ಶನ ಮಾಡಬೇಕಾಗಿರತಕ್ಕವರು. ಈ ರೀತಿ ಅಧಿಕಾರವನ್ನು ಉಪಯೋಗಿಸಿಕೊಂಡು ಅಸಂವಿಧಾನಾತ್ಮಕವಾಗಿ ನಡೆದಿರುವುದನ್ನು ಖಂಡಿಸಲೇ ಬೇಕಾಗುತ್ತದೆ. ಈ ರೀತಿ ನೀವು ನಡೆದುಕೊಳ್ಳುವುದಾದರೆ ಶಾಸನ ಸಭೆ ಏಕೆ ಬೇಕು? ಸಂಪುಟ ಏಕೆ ಬೇಕು? ನೀವೇಕೆ ಚರ್ಚೆ ಮಾಡುತ್ತೀರಿ? ಎಲ್ಲೋ ಇಬ್ಬರು ಕುಳಿತು ತೀರ್ಮಾನ ಮಾಡಿದ್ದಕ್ಕೆ ತಾವೇನು ಘನತೆವೆತ್ತ ಸಚಿವರಿದ್ದೀರಿ ಕೈಯೆತ್ತಿ ಹೋಗಿಬಿಟ್ಟರೆ ಎಲ್ಲರಿಗೂ ಗೌರವ ಬರುತ್ತದೆ. ನಾವು ನಾಳೆ ಹೋಗಿ ಅಲ್ಲೇ ಕುಳಿತುಕೊಂಡು ಏನಾದರೂ ಕೇಳುತ್ತೇವೆ.

ಏನ್ ಸ್ವಾಮಿ, ಈ ಕೆಲಸವಾಗಬೇಕು ನಮ್ಮದು ಮಾಡಿಕೊಡಿ ಎಂದು ಹೇಳುತ್ತೇವೆ. ಆ ನಿರ್ಣಯ ಪಾಸ್ ಮಾಡಿದರೆ ನಮ್ಮ ತಕರಾರು ಇಲ್ಲ. ಅಲ್ಲಿಯವರೆಗೆ ತಾವು ಸಂಪುಟ, ನೀವು ಓತ್ ಆಫ್ ಸೀಕ್ರೆಸಿ ಒಪ್ಪಿಕೊಂಡಿರುವವರು. ಗೌಪ್ಯತೆಯನ್ನು ಒಪ್ಪಿರುವವರು. ದುರ್ದೈವ. ಇವತ್ತು ಸಂಪುಟದಲ್ಲಿ ಆಗುವ ಚರ್ಚೆಗಳೆಲ್ಲ ಆಚೆಗೆ ಬರುತ್ತಿವೆ. ಇವತ್ತು ಸಂಪುಟದಲ್ಲಿ ಆಗಬೇಕಾದ ತೀರ್ಮಾನಗಳೆಲ್ಲ ಹೊರಗಡೆಯಿಂದ ಆಗುತ್ತಿವೆ. ಇವತ್ತು ಸಂಪುಟ ಸಚಿವರೆ ಏನು ಮಾತನಾಡಬೇಕಾಗಿತ್ತು. ಅದನ್ನು ಬೇರೆಯವರು ಹೊರಗಡೆ ಮಾತನಾಡುವ ಸ್ಥಿತಿ ಬಂದಿದೆ ದಯವಿಟ್ಟು ಎಲ್ಲೋ ಒಂದು ಕಡೆ ಇತಿಶ್ರೀ ಹಾಕಬೇಕು. ಈ ರಾಜ್ಯ ನಾವೆಲ್ಲ ಹೋದ ಮೇಲೂ ಬಹಳ ವರ್ಷ ಮುಂದಕ್ಕೆ ಹೋಗಬೇಕು. ಕೆಲವು ಸಲ ಕನ್‌ವೆನ್ಸ್‌ನ್ ಅನ್ನು ಇಟ್ಟುಕೊಂಡು ಸರ್ಕಾರವನ್ನು ನಡೆಸಬೇಕಾಗುತ್ತದೆ. ಎಲ್ಲಾ ಕಾಲಕ್ಕೂ ನಿಯಮಗಳನ್ನು, ಸಂವಿಧಾನ, ಕಾನೂನು ಇಟ್ಟುಕೊಂಡು ಮಾಡುವುದಕ್ಕಾಗುವುದಿಲ್ಲ. ಕನ್‌ವೆನ್ಸನ್ ಅನ್ನು ತಪ್ಪು ಮಾಡಬೇಡಿ. ಇವತ್ತು ನೀವು ಯಾವುದೋ ಒತ್ತಡಕ್ಕೆ ಸಿಕ್ಕಿರಬಹುದು. ನಾಳೆ ಬರುವವರೆಗಾದರೂ ಇಲ್ಲಿ ಒಂದು ಆಡಳಿತ ಇತ್ತು. ಇದಕ್ಕೆ ಇಂಥಿಂಥ ನಿಯಮಗಳು ಇತ್ತು. ಅದರೊಳಗೆ ನಾವು ಕೆಲಸ ಮಾಡಬೇಕು ಎನ್ನುವ ಸ್ಥಿತಿಯನ್ನು ತಾವು ನಿರ್ಮಾಣ ಮಾಡಬೇಕು. ಈಗ ಆಗಿರುವುದು ಒಳ್ಳೆಯ ಬೆಳವಣಿಗೆ ಅಲ್ಲ. ಇದನ್ನು ಸಹಿಸುವುದಕ್ಕೆ ಸಾಧ್ಯವಿಲ್ಲ. ದಯವಿಟ್ಟು. ಇದು ಯಾರೂ ಮಾಡಿದರೂ ಅದು ಸಂವಿಧಾನಕ್ಕೆ ಮತ್ತು ಇಡೀ ರಾಜ್ಯಕ್ಕೆ ಮಾಡಿರುವ ಅವಮಾನವೆಂದು ನಾವು

ಭಾವಿಸಬೇಕಾಗುತ್ತದೆ. ಇಂಥ ಕೃತ್ಯವನ್ನು ನಿಲ್ಲಿಸಲು ತಾವು ಕೈ ಹಾಕಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ):- ಯಡಿಯೂರಪ್ಪನವರು ಪತ್ರಿಕೆಯಲ್ಲಿ ಬಂದಿರುವ ವಿಚಾರವನ್ನು ಸಭೆಯ ಗಮನಕ್ಕೆ ತರುವ ಮೂಲಕ ಒಂದು ಬೆಳಕನ್ನು ಚೆಲ್ಲಿದ್ದಾರೆ. ನನಗನಿಸುತ್ತದೆ. ವಿಧಾನ ಸಭೆಯಲ್ಲಿ ಸುಮಾರು 20. 25. 30 ವರ್ಷಗಳಿಂದ ಇರುವ ಸಿಂಧ್ಯಾ, ಸಿದ್ದರಾಮಯ್ಯನವರು, ಮಂಜುನಾಥ್‌ರವರು, 30 ವರ್ಷ ಆಗಿರಬೇಕಲ್ಲವೇ? ಮಂತ್ರಿಗಳಾಗಿ 22 ವರ್ಷ ಆಗಿರಬೇಕಲ್ಲವೇ? ತಾವು ಇದ್ದೀರಿ ಮತ್ತು ಸಿದ್ದರಾಮಯ್ಯನವರು ಇದ್ದಾರೆ. ಈ ಕಡೆ ಮಂಜುನಾಥ್‌ರವರಂತೂ ಅವರು ಉಪಾಧ್ಯಕ್ಷರಾಗಿ 67ರಿಂದ ನಾವಿದ್ದೇವೆ. ನಾವು ಇಲ್ಲಿ ಯಾರನ್ನೂ ಆಕ್ಷೇಪಣೆ ಮಾಡುತ್ತೇವೆ..... ನಾವು ಇರುತ್ತೇವೆ. ಹೋಗುತ್ತೇವೆ. ಈ ಸದನದಲ್ಲಿ ಎಷ್ಟು ವರ್ಷ ಇರುತ್ತೇವೊ? ಹೋಗುತ್ತೇವೊ? ಆ ಪ್ರಶ್ನೆ ಬೇರೆ. ಮಂತ್ರಿಗಳು ಎಷ್ಟು ವರ್ಷ ಇರುತ್ತಾರೋ? ಆ ವಿಚಾರ ಬೇರೆ. ಇದೊಂದು ಸದನ. ವ್ಯವಸ್ಥೆ ಸರ್ಕಾರ. ಸಚಿವ-ಸಂಪುಟ, ಅದರ ವ್ಯವಸ್ಥೆ ಯಾವ ರೀತಿ ನಡೆಯಬೇಕು ಅದೆಲ್ಲ ಸಂವಿಧಾನಬದ್ಧವಾಗಿ ತೀರ್ಮಾನವಾಗಿದೆ. ನಾವು ಅದನ್ನು ಬದಲಾವಣೆ ಮಾಡುವುದ್ದಕ್ಕಾಗುವುದಿಲ್ಲ. ಆದರೆ. ಅದನ್ನು ಮೀರಿ ನಡೆದಾಗ ನೀವೇ ಸಂವಿಧಾನಕ್ಕೆ ಅಪಚಾರ ಮಾಡಿದ ಹಾಗಾಗುತ್ತದೆ. ಎಲ್ಲೋ ಒಂದು ಕಡೆ ಸಂವಿಧಾನವನ್ನು ಮೀರಿ ದಾರಿತಪ್ಪಿ ಹೋಗುತ್ತೇನೇನೋ? ಹೋಗುತ್ತೇವೆ ಎನ್ನುವ ರೀತಿಯಿಂದ ನಾಳೆ ಮುಂದೆ ಬರುವವರು, ಈಗಾಗಲೇ ಈ ಪರಿಸ್ಥಿತಿಯಾದರೆ ಮುಂದೇನಾಗಬಹುದು? ಎನ್ನುವ ಬಗ್ಗೆ ಒಂದು ಚಿಂತನೆ. ಪತ್ರಿಕಾಕರ್ತರು ಬಹಳ ದೂರದಲ್ಲಿದ್ದರು. ಅವರನ್ನು ಬಿಡಲಿಲ್ಲ-ಮತ್ತು ಉಪಮುಖ್ಯಮಂತ್ರಿಗಳು ಬಂದರು. ತಕ್ಷಣ ಹೊರಟು ಹೋದರು ಎಂದು ಪತ್ರಿಕೆಯಲ್ಲಿ ಬಂದಿದೆ. ಹಾಗಾದರೆ. ಇದ್ದಿರಿ. ಹೋಗಲ್ಲ. ನಾನು ಹೇಳುವುದು ಕೇಳಿ ದಯವಿಟ್ಟು.

ಶ್ರೀ ಸಿದ್ದರಾಮಯ್ಯ(ಉಪ ಮುಖ್ಯಮಂತ್ರಿಗಳು):-ಅಲ್ಲಿಗೆ ನಾನು ಹೋಗಲೇ ಇಲ್ಲ. ನಿಮ್ಮ ಇನ್‌ಫರ್ಮೇಷನ್‌ಗೆ ಹೇಳುತ್ತೇನೆ. ನಾನು ಹೋಗಲು ಇಲ್ಲ. ಮೀಟಿಂಗ್ ಗೊತ್ತಿಲ್ಲ. ಆದ್ದರಿಂದ ಪತ್ರಿಕೆಯಲ್ಲಿ ಎಷ್ಟರಮಟ್ಟಿಗೆ ಸುಳ್ಳು ವರದಿ ಬರುತ್ತವೆ ಎನ್ನುವುದನ್ನು ನೀವು ಗಮನಿಸಬೇಕಾಗುತ್ತದೆ. I am making it very very clear ನಾನು ಅಲ್ಲಿಗೆ ಹೋಗಲೂ ಇಲ್ಲ. ಮೀಟಿಂಗ್‌ನಲ್ಲೂ ಇರಲಿಲ್ಲ. ಆದುದರಿಂದ, ನನಗೆ ಹೋಗಿದ್ದರು. ಮಧ್ಯದಲ್ಲಿ ಬಂದು ಬಿಟ್ಟರು ಎನ್ನುವುದು ಇದು ಸುಳ್ಳು ವರದಿ.

ಶ್ರೀ ವಾಟಾಳ್ ನಾಗರಾಜ್;- ನಾನು ಒಪ್ಪುತ್ತೇನೆ. ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳುತ್ತಿದ್ದೇನೆಯೇ ಹೊರತು ತಾವು ಹೋಗಿದ್ದೀರಿ ಎಂದು ನಾನು ಹೇಳುತ್ತಿಲ್ಲ. ಪತ್ರಿಕೆಯಲ್ಲಿ ಬಂದರು. ಬೇಗ ತರಾತುರಿಯಲ್ಲಿ..... ಇಲ್ಲಿ ನಮಗೆ ಪತ್ರಿಕೆಗಳೇ ಮೂಲ. ಮಾಧ್ಯಮವೇ ಮೂಲ. ಅದನ್ನು ಬಿಟ್ಟು ಬೇರೆ ಹೋಗುವುದಕ್ಕೆ ಸಾಧ್ಯವಿಲ್ಲ. ನಾನು ತಮಗೆ ಹೇಳುತ್ತಿದ್ದೇನೆ. ಈ ರೀತಿ ಕಡತಗಳನ್ನು ತೆಗೆದುಕೊಂಡು ಹೋಗಿ ಯಾರು ಬೇಕಾದರೂ ನೋಡಬಹುದು. ನೀವು ತೋರಿಸಲಿಲ್ಲ ಎಂದರೆ ನಾವು ಬೆಂಬಲ ಕೊಟ್ಟಿರುವುದನ್ನು ಹಿಂತೆಗೆದುಕೊಳ್ಳುತ್ತೇವೆ. ನೀವು ಮಾಡುತ್ತೀರೋ. ಇಲ್ಲವೋ ಹೇಳಿ ಎಂದು ಒಂದು ತರಹ ಈ ವ್ಯವಸ್ಥೆಯಾದರೆ ಸರ್ಕಾರದ ಭದ್ರತೆಗೂ ಅಪಾಯ ಬರುತ್ತದೆ ಮತ್ತು ಅಧಿಕಾರಿಗಳಲ್ಲಿಯೂ ಒಂದು ರೀತಿ ನಿಮ್ಮ ಸರ್ಕಾರದ ಬಗ್ಗೆ ಇರುವ ಭಯ-ಭೀತಿ. ಕೆಲಸ ಮಾಡುವ ಉತ್ಸಾಹ ಹೋಗುತ್ತದೆ. ಸರ್ಕಾರದ ಭದ್ರತೆಗೆ ತೀವ್ರವಾದ ಅಪಾಯವಾಗುತ್ತದೆ. ಇಲ್ಲ. ನೇರವಾಗಿ. ನಾವು ಯಾರೂ ಚುನಾವಣೆಗೆ ಹೋಗುವುದಕ್ಕೆ ತಯಾರಾಗಿಲ್ಲ. ಅದನ್ನು ಸ್ಪಷ್ಟಪಡಿಸೋಣ, ಸುಮ್ಮನೆ, ನಾವು ಚುನಾವಣೆಗೆ ನಾಳೆ ಬೆಳಿಗ್ಗೆ ರೆಡಿ ಇದ್ದೇವೆ. ಎನ್ನುವ ವಿಚಾರಕ್ಕೆ ಯಾರೂ ಹೋಗುವುದಲ್ಲ. ಚುನಾವಣೆ ನಡೆದು 8 ತಿಂಗಳಾಗಿದೆ. ನಾವು ಚುನಾವಣೆ ಸಮಯದಲ್ಲಿ ಯಾವ್ಯಾವ ರೀತಿ ಅನುಭವಿಸಿದ್ದೇವೆ ಅನ್ನುವುದು ತಮಗೆ ಗೊತ್ತಿದೆ. ಆದರೆ. ಸಮ್ಮಿಶ್ರ ಸರ್ಕಾರ ನಾವು ಬೆಂಬಲ ಕೊಟ್ಟಿದ್ದೇವೆಂದು ಹೇಳುವ ಒಂದೇ ಕಾರಣದಿಂದ ಮುಖ್ಯಮಂತ್ರಿಗಳ ಕತ್ತನ್ನು ಹಿಸುಕುವುದು. ಕೈಹಿಡಿಯುವುದು. ಅವರ ಮನೋಧರ್ಮಕ್ಕೆ ವಿರುದ್ಧವಾಗಿ ಮುಖ್ಯಮಂತ್ರಿಗಳ ಕಾರ್ಯಕಲಾಪ ನಡೆಯದಿರುವ ವಿಚಾರವನ್ನು ಮಾಡುವುದು ಅವರು ಮುಖ್ಯಮಂತ್ರಿಗೆ ಸ್ವಾತಂತ್ರ್ಯ ಕೊಡದಿರುವುದು ಇವೆಲ್ಲ ಎಲ್ಲೋ ಒಂದು ಕಡೆ ನಿಜಕ್ಕೂ ಒಂದು ಒಳ್ಳೆಯ ಕೆಟ್ಟ ಸಂಪ್ರದಾಯವಾಗುತ್ತದೆ. ಆ ರೀತಿ ಕುಳಿತರೆ ಮುಂದಾಗದೆ ಇದ್ದ ರೀತಿಯಲ್ಲಿ...... ಒಳ್ಳೆಯ ಕೆಟ್ಟ ಸಂಪ್ರದಾಯ ಎಂದರೆ.... ಅದು ಕರೆಕ್ಟ್. ಅದು ಒಳ್ಳೆಯ ಪದ. ನಾನೇನು ಹೇಳುತ್ತೇನೆ. ತಾವೆಲ್ಲ ಹಿರಿಯರಿದ್ದೀರಿ. ನಾನು ಸಿದ್ದರಾಮಯ್ಯನವರನ್ನು ಇಂಥ ವಿಚಾರದಲ್ಲಿ, ಸ್ಪಷ್ಟತೆ ಎಲ್ಲ ವಿಚಾರದಲ್ಲೂ ಅನೇಕ ಸಾರಿ ಅಭಿನಂದಿಸಿದ್ದೇನೆ. ಸಿಂಧ್ಯರವರ ಬಗ್ಗೆ ಇಂಥ ವಿಚಾರ ಮಾತನಾಡುವಾಗ ಈ ಕಡೆ ಕುಳಿತು ಅನೇಕ ಸಾರಿ ಮಾತನಾಡಿದ್ದೇನೆ. ನಾನು ತಮಗೇನು ಹೇಳುತ್ತಿದ್ದೇನೆ ಅಂದರೆ. ಇಂಥ ಪರಿಸ್ಥಿತಿ ಬಂದಾಗ, ನೀವುಗಳು ಹೋಗಿದ್ದೀರಿ..... ರಾತ್ರಿ ಸಿಂಧ್ಯರವರಿಗೆ..... ನೀವೆಲ್ಲ ಇದನ್ನು ಹೇಳಬೇಕು. ಹಿರಿಯರಿಗೆ ಇದು ಸರಿಯಲ್ಲವೆಂದು ಅವರಿಗೆ ಹೇಳಿ. ಉಪದೇಶ ಹೇಳಿ. ಇದೆಲ್ಲ ಮಾಡಬಾರದು. ಮಾಡುವುದರಿಂದ ಸರ್ಕಾರಕ್ಕೆ ಒಂದೇ ಅಲ್ಲ. ರಾಜ್ಯಕ್ಕೆ ಕೆಟ್ಟ ಹೆಸರು ಬರುತ್ತದೆ. ಸಂವಿಧಾನಕ್ಕೆ ಅಗೌರವವಾಗುತ್ತದೆ. ನಾವು ಈ ರೀತಿ ನಡೆದುಕೊಳ್ಳಬಾರದು ಎಂದು

ತಾವು ಸ್ಪಷ್ಟವಾಗಿ ಹೇಳುವ ತೀರ್ಮಾನಕ್ಕೆ ನೀವು ತೀರ್ಮಾನ ಮಾಡುತ್ತೀರಿ. ಮುಂದೆ ಈ ರೀತಿ ಏನಾದರೂ ಆದರೆ. ನಾವು ರಾತ್ರಿ ಸಮಯದಲ್ಲಿ ಅಲ್ಲಿ ಬರುವುದು. ನಮಗೆ ಕಡತ ತೋರಿಸಿ. ಬೇರೊಬ್ಬರಿಗೆ ಏಕೆ ತೋರಿಸುತ್ತೀರಿ. ನಾವು ನೋಡಬೇಕಾಗುತ್ತದೆಂದು ಹೇಳಬೇಕಾಗುತ್ತದೆ. ತೀರಾ ನೀವು ತೋರಿಸಲಿಲ್ಲವೆಂದರೆ. ಅಲ್ಲಿ ಕೆಂಪು ಕಟ್ಟಡಕ್ಕೆ ನಾವು ಹೋಗಬೇಕಾಗುತ್ತದೆ. ನಿನ್ನೆ ರಾತ್ರಿ ಬಾಲಬ್ರೂಯಿಯಲ್ಲಿ ತೋರಿಸದೇ ಇರುವವರಿಗೆ ಕಡತ ತೋರಿಸಿದ್ದಾರೆ. ಅದು ಸಂವಿಧಾನಕ್ಕೆ ವಿರುದ್ಧವಾಗಿದೆ. ನಮಗೂ ನೀವು ಅವಕಾಶ ಕೊಡಬೇಕೆಂದು ಹೇಳಿ. ಅಲ್ಲಿ ಅರ್ಜಿ ಹಾಕಿ ನ್ಯಾಯಧೀಶರ ಮೂಲಕ ನಾವು ಬರಬೇಕಾಗುತ್ತದೆ. ಈ ದೇಶದ ಎಲ್ಲ ಮಾಜಿ ಪ್ರಧಾನಿಗಳಿಗೂ ನೀವು ಕಡತಗಳನ್ನು ತೆಗೆದುಕೊಂಡು ಕುಳಿತುಕೊಳ್ಳಲಾಗುವುದಿಲ್ಲ. ಸ್ವಲ್ಪ, ಎಲ್ಲೋ ಒಂದು ಕಡೆ ಸಂವಿಧಾನದ ಬಗ್ಗೆ ಹೆಚ್ಚಿನ ಗಮನ ಕೊಡುತ್ತೀರಿ ಎಂದು ನಾನಂದುಕೊಂಡಿದ್ದೇನೆ. ನಿನ್ನೆ ಇದು ನಿಜವಾಗಲೂ ನಡೆದಿದ್ದರೆ. ಇದು ಅಕ್ಷಮ್ಯ ಅಪರಾಧ. ಅದು ಆಗುವುದು ಒಳ್ಳೆಯದಲ್ಲ. ಸಂವಿಧಾನಕ್ಕೆ ಅಪಚಾರ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಉಪಾಧ್ಯಕ್ಷರು:- ಜಯಪ್ರಕಾಶ್ ಹೆಗ್ಡೆಯವರೆ ಸ್ವಲ್ಪ ಬೇಗ ಮುಗಿಸಿ. ಬಹಳ ಇಂಪಾರ್ಟೆಂಟ್ ಸಬ್ಜೆಕ್ಟ್ ಇದೆ. ವಿತ್ತಿಯ ಕಾರ್ಯಕಲಾಪಗಳ ಬಗ್ಗೆ ಇದೆ. 2 ನಿಮಿಷದಲ್ಲಿ ಮುಗಿಸಿ

ಶ್ರೀ ಕೆ. ಜಯಪ್ರಕಾಶ ಹೆಗ್ಡೆ (ಬ್ರಹ್ಮಾವರ):- ಮಾನ್ಯ ಉಪಾಧ್ಯಕ್ಷರೆ......

ಶ್ರೀ ಎಸ್.ಎಸ್. ಪಾಟೀಲ್:- ಇದನ್ನು ಯಾವ ನಿಯಮದಡಿಯಲ್ಲಿ ನಡೆಸುತ್ತಿದ್ದೀರಿ? ಹೆಗಡೆಯವರೆ ಸ್ವಲ್ಪ ತಡೆಯಿರಿ. ನನ್ನ ಪ್ರಶ್ನೆ ಇಲ್ಲಿರುವುದು. ಸಂವಿಧಾನ. ನಿಯಮದ ಬಗ್ಗೆ ಎಲ್ಲರೂ ಮಾತನಾಡುತ್ತೀರಿ. ಇವತ್ತಿನ ನಡವಳಿಕೆಗಳು ಯಾವ ನಿಯಮದಡಿಯಲ್ಲಿ ನಡೆದಿದೆ?

(ಗೊಂದಲ)

ಶ್ರೀ. ಕೆ. ಜಯಪ್ರಕಾಶ್ ಹೆಗ್ಡೆ:- ಸಂವಿಧಾನ. ನಿಯಮದ ಬಗ್ಗೆ ಆಗಿದ್ದರೆ ಈ ಚರ್ಚೆ ನಡೆಯುತ್ತಿರಲಿಲ್ಲ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್:- ಅವರು ಎದ್ದು ಕುಳಿತರು.....

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಈಗ ನೀವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ:- ಯಾವ ನಿಯಮದಡಿಯಲ್ಲಿ ಸರ್ಕಾರದ ಮಂತ್ರಿಗಳು.....

(ಗೊಂದಲ)

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:- ನಾನು ಮಾತನಾಡುತ್ತಿದ್ದೇನೆ. ದಯವಿಟ್ಟು ನನಗೆ ಅವಕಾಶ ಕೊಡಿ.

ಶ್ರೀ ಎಸ್.ಎಸ್. ಪಾಟೀಲ್:- ಯಾವ ನಿಯಮದಲ್ಲಿ ಕೊಟ್ಟಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ;- ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ. ನಾನು ಮಾತನಾಡುತ್ತಿದ್ದೇನೆ. ನಿಮಗೆ ಮಾತನಾಡಲು ಬಿಟ್ಟರೆ ನೀವು ಮಾತನಾಡಿ.

ಉಪಾಧ್ಯಕ್ಷರು:- ದಯವಿಟ್ಟು ಕುಳಿತುಕೊಳ್ಳಿ. ಮುಗಿದು ಹೋಗಲಿ. ತಾವು ಮುಗಿಸಿ. ಪಾಟೀಲ್‌ರವರೆ. ಹನುಮಂತಪ್ಪನವರೆ ಪ್ಲೀಸ್ ಎಲ್ಲ ಕುಳಿತುಕೊಳ್ಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಸಂವಿಧಾನದ ಪ್ರಕಾರ ಎಲ್ಲ ನಡೆದುಕೊಂಡು ಹೋಗಿದ್ದರೆ ಈ ಚರ್ಚೆಗೆ ಬರುತ್ತಿರಲಿಲ್ಲ. ಈ ಚರ್ಚೆ ಮಾಡುವ ಅವಕಾಶ ಇರಲಿಲ್ಲ.

ಶ್ರೀ ಅರಗ ಜ್ಞಾನೇಂದ್ರ :- ನಿನ್ನೆ ರಾತ್ರಿ ಯಾವ ನಿಯಮದಲ್ಲಿ ನಡೆಯಿತು? ನಿನ್ನೆ ರಾತ್ರಿ ನಡೆದ ನಿಯಮಾವಳಿಯಲ್ಲಿ ಹೇಳಿ. ಈಗ ನಿಯಮ ಹೇಳುವುದು. ನಿಯಮ ಇಲ್ಲದ ಘಟನೆಯನ್ನು ಇಲ್ಲಿ ಪ್ರಸ್ತಾಪಿಸಲಾಗುತ್ತಿದೆ.

ಶ್ರೀ ಎಸ್.ಎಸ್. ಪಾಟೀಲ್:- ತಾವು ಪರ್ಮಿಷನ್ ಕೊಟ್ಟಿಲ್ಲ. ತಾವು ಅವಕಾಶ ಮಾಡಿಲ್ಲ. ಕಡತ ತೆಗೆದು ನೋಡಿ.....

ಶ್ರಿ ಕೆ. ವಿಶ್ವೇಶ್ವರ ಹೆಗಡೆ:- ಅವರು ಅವಕಾಶ ಮಾಡಿಕೊಟ್ಟಿದ್ದಕ್ಕೇ ಇಲ್ಲಿ ಚರ್ಚೆ ನಡೆಯುತ್ತಿರುವುದು......

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ ;- ನೀವು ನಿಂತು ಮಾತನಾಡಿರುವುದು ನಿಯಮದಡಿಯಲ್ಲಿ ಅಲ್ಲವೇ ಅಲ್ಲ. ಉಪಾಧ್ಯಕ್ಷರು ನನ್ನನ್ನು ಕರೆದಿದ್ದಾರೆ. ನಾನು ಮಾತನಾಡುತ್ತೇನೆ.

ಶ್ರೀ ಆಲ್ಕೋಡ್ ಹನುಮಂತಪ್ಪ:- ಮಾತನಾಡಲಿ. ಯಾವ ನಿಯಮದಲ್ಲಿ ಒಬ್ಬ ವ್ಯಕ್ತಿಗಳ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ತಾವು ಕಲ್ಪಿಸಿಕೊಟ್ಟಿದ್ದೀರಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಮಾನ್ಯ ಮಾಧುಸ್ವಾಮಿಯವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಪ್ರಾರಂಭದಿಂದಲೇ ಸಂವಿಧಾನದ ಪ್ರಕಾರ ಯಾವುದೂ ನಡೆದುಕೊಂಡು ಬಂದಿಲ್ಲ. ಘನತೆವೆತ್ತ ರಾಜ್ಯಪಾಲರು ಆವತ್ತು ಕೆಲವು ಸಚಿವರು

ಓತ್ ತೆಗೆದುಕೊಂಡಿದ್ದನ್ನು ತಪ್ಪು ಎಂದು ಹೇಳಿದ್ದಾರೆ. ಅನಂತರದಲ್ಲಿ ಪ್ರೊಟೆಂ ಸ್ಪೀಕರ್ ಇಲ್ಲಿ ಶಾಸಕರುಗಳು ಏನು ಓತ್ ತೆಗೆದುಕೊಂಡರು ಅದನ್ನು ತಪ್ಪು ಎಂದು ಹೇಳಿ.... ಇವತ್ತು ಪರಿಸ್ಥಿತಿ ಏನಾಗಿದೆಯೆಂದರೆ ಓತ್ ತೆಗೆದುಕೊಂಡವರು ಮಾತ್ರ ಇಲ್ಲಿ ಸದಸ್ಯರಾಗಿ ಕುಳಿತುಕೊಳ್ಳಲು ಅವಕಾಶ. ಪಾಯಶಃ ನನ್ನ ಅಭಿಪ್ರಾಯ ಎಂದರೆ. ಬೇರೆಯವರು ಬಂದು ಒಳಗೆ ಬಂದು ಕುಳಿತರೂ ಸಹ ಅವರಿಗೆ ಶಿಕ್ಷೆ ಕೊಡಲಿಕ್ಕೆ ಅವಕಾಶವಿಲ್ಲ. ಏಕೆಂದರೆ. ಹೆಚ್ಚಿನವರು ಯಾರೂ ಸಂವಿಧಾನದ ಪ್ರಕಾರ ಇಲ್ಲಿ ಓತ್ ತೆಗೆದುಕೊಂಡಿಲ್ಲ. ತಪ್ಪು ಮಾಡಿದ್ದಾರೆ. ತಪ್ಪನ್ನು ತಪ್ಪು ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಅದು ಮುಂದುವರಿಸುತ್ತಾ ಹೋದರೆ.... ಕಳೆದ ಬಾರಿ ಒಂದು ಘಟನೆ ನಡೆಯಿತು. ಈ ಸದನದ ಸದಸ್ಯರೊಬ್ಬರು ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಹೋಗಿ ಕುಳಿತಾಗ ಅವರನ್ನು ಅರೆಸ್ಟ್ ಮಾಡಿ ಕೂರಿಸಿದರು. ಒಂದು ಘಟನೆ ನಡೆದಿತ್ತು. ಆದುದರಿಂದ, ಯಾವುದೇ ಒಬ್ಬ ಸದಸ್ಯ ಓತ್ ತೆಗೆದುಕೊಳ್ಳುವಾಗ ತಪ್ಪು ಮಾಡಿದರೆ ಸರಿಪಡಿಸಿಕೊಂಡು, ಒಂದು ಸಾರಿ ಹೇಳಿದ ಮೇಲೆ ಅದನ್ನು ಸರಿಪಡಿಸಿಕೊಳ್ಳುವಂಥ ಅವಶ್ಯಕತೆ ಇದೆ. ಆದರೆ. ಇವತ್ತಿನ ಪತ್ರಿಕೆಯಲ್ಲಿ ಬಂದಿದ್ದು. ಪತ್ರಿಕೆಯಲ್ಲಿ ಬಂದಂಥದ್ದಕ್ಕೆ ಮಾನ್ಯ ಸಿದ್ದರಾಮಯ್ಯನವರ ಹೆಸರು ಬಂದಾಗ ಅವರು ಸುಳ್ಳು ಬಂದಿದೆ ಎಂದು ಹೇಳಿದರು. ಆದರೆ. ಅವರು ಹೋದದ್ದು ಸುಳ್ಳು. ತಾವು ಹೋದದ್ದು ಸತ್ಯಕ್ಕೆ ದೂರವಾದುದು. ಹೌದು. ಮಾನ್ಯ ಮುಖ್ಯಮಂತ್ರಿಗಳು. ಆ ಘಟನೆ ನಡೆದಿದ್ದು ಸತ್ಯವೆಂದು ಒಪ್ಪಿಯಾಗಿದೆ. ನೇರವಾಗಿ ಒಪ್ಪಿಕೊಂಡಿದ್ದಾರೆ. ಈ ಘಟನೆ ಏನು ನಡೆಯಿತು? ಚರ್ಚೆ ಏನಾಯಿತು? ಅದರ ಬಗ್ಗೆ ಮಾತ್ರ ಉತ್ತರ ಕೇಳುವುದು ಬಿಟ್ಟರೆ. ಬೇರೆ ಏನನ್ನೂ ಕೇಳುತ್ತಿಲ್ಲ. ಒಂದು ಈ ಚರ್ಚೆ ಆಗುವಾಗ ಕಾಮನ್ ಮಿನಿಮಮ್ ಪ್ರೋಗ್ರಾಂ ಪ್ರಕಾರ ಎಂದು ಆಯಿತು. ಕಾಮನ್ ಮಿನಿಮಮ್ ಪ್ರೋಗ್ರಾಂ ಪ್ರಕಾರ ಎರಡೂ ಕಡೆಯವರೂ ಕೂತು ಚರ್ಚೆ ಮಾಡುವುದಕ್ಕೆ ಯಾರಿಗೂ ವಿರೋಧ ಇಲ್ಲ. ತಪ್ಪೂ ಇಲ್ಲ. ಅದಕ್ಕೆ ಮೀರಿ ಏನಾದರೂ ನಡೆದಿದ್ದರೆ ತಪ್ಪಾಗುತ್ತದೆ. ಅದನ್ನು ಸದನದ ಗಮನಕ್ಕೆ ತರಬೇಕಾಗುತ್ತದೆ. ಅದನ್ನು ತಾವು ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಸನ್ಮಾನ್ಯ ಉಪಾಧ್ಯಕ್ಷರೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಬಿ.ಎಸ್. ಯಡಿಯೂರಪ್ಪನವರು....

ಉಪಾಧ್ಯಕ್ಷರು: ಶೆಟ್ಟರ್‌ರವರೇ ಇನ್ನು ವಿತ್ತೀಯ ಕಾರ್ಯಕಲಾಪಗಳು ಇವೆ. ಆ ಮೇಲೆ ಬೇಕಾದರೆ ಮಾತನಾಡಿ. ಮೊದಲು ಇವರು ಮುಗಿಸಲಿ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಉಪಾಧ್ಯಕ್ಷರೆ, ನಿನ್ನೆ ನಡೆದ ಘಟನೆ ಬಗ್ಗೆ ಈಗಾಗಲೇ ಪತ್ರಿಕೆಗಳಲ್ಲಿ ವರದಿ ಬಂದಿದೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಹಿರಿಯ ನಾಯಕರು ಮಾತನಾಡಿದ್ದಾರೆ. ಸಂವಿಧಾನಕ್ಕೆ ಅಪಚಾರ ಆಗುವ ರೀತಿಯಲ್ಲಿ ನಿನ್ನೆ ನಡೆದ ಘಟನೆ ಇವತ್ತು ಎದ್ದು ಕಾಣುವಂಥಾದ್ದು ಮತ್ತು ಈ ಒಳಗೆ ಮುಖ್ಯ ಮಂತ್ರಿಗಳು ಸಮ್ಮಿಶ್ರ ಸರ್ಕಾರದ ನಾಯಕತ್ವ ವಹಿಸಿದ್ದಾರೆ. ಆ ಮುಖ್ಯ ಮಂತ್ರಿಗಳ ಸ್ಥಾನ ಹೇಗಿದೆ ಎಂದರೆ. ರಿಮೋಟ್ ಕಂಟ್ರೋಲ್ ಮುಖ್ಯ ಮಂತ್ರಿಗಳು ಎನ್ನುವ ರೀತಿಯಲ್ಲಿ ಇದೆ ಎಂದು ಜನ ಮಾತನಾಡುತ್ತಿದ್ದಾರೆ.

ಉಪಾಧ್ಯಕ್ಷರು: ಸಬ್ಜೆಕ್ಟ್ ಎಲ್ಲ ಸಿಮಿಲರ್ ತಾನೆ. ಎಲ್ಲರೂ ಮಾತನಾಡಿದ್ದು ಒಂದೇ ಸಬ್ಜೆಕ್ಟ್.

ಶ್ರೀ ಜಗದೀಶ್ ಶೆಟ್ಟರ್: ಯಾರ್‍ಯಾರ ಕಡೆ ಹೋಗಿ ಅವರು ಫೈಲ್ ತೋರಿಸುವಂಥದ್ದು. ಎಲ್ಲೆಲ್ಲೋ ಹೋಗಿ ಅಡ್ಡಾಡುವಂಥ ಪರಿಸ್ಥಿತಿ ಯಾವುದೇ ಸರ್ಕಾರಿ ನಿರ್ಣಯವನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಎಲ್ಲೆಲ್ಲಿ ಅವರು ಹೋಗಬೇಕು. ಕನ್‌ಸಲ್ಟೇಷನ್ ಮಾಡಬೇಕು. ಯಾವ ಪರಿಸ್ಥಿತಿ ಹೇಗಿದೆ ಎಂದರೆ. ರಾಜ್ಯದಲ್ಲಿ ಸಂವಿಧಾನಬದ್ಧವಾದ ಸರ್ಕಾರ ಇದೆಯೋ ಇಲ್ಲ ಎನ್ನುವ ರೀತಿಯಲ್ಲಿ ಸಂಶಯ ಪಡುವ ರೀತಿಯಲ್ಲಿ ನಡೆಯುತ್ತಿದೆ. ಅದರಲ್ಲೂ ಧರ್ಮಸಿಂಗ್‌ರವರ ಬಗ್ಗೆ ಹಿರಿಯ ನಾಯಕರು ಒಬ್ಬರು ಹೇಳಿದರು. ಅವರ ಬಗ್ಗೆ ಏಕವಚನದಲ್ಲಿ ಮಾತನಾಡಿದರು ಎಂದು. ನಿಜವಾಗಿ ಏನಾದರೂ ಧರ್ಮಸಿಂಗ್‌ರವರಿಗೆ ನೈತಿಕತೆ ಇದ್ದರೆ ಸಂವಿಧಾನಬದ್ಧವಾಗಿ ಕರ್ತವ್ಯ ನಿರ್ವಹಣೆ ಮಾಡುವ ಧೈರ್ಯ ಅವರಿಗೆ ಇದ್ದರೆ ಈ ರೀತಿ ಸಂವಿಧಾನ ವಿರೋಧವಾಗಿ ಕೆಲಸ ಮಾಡುವುದು ಬಿಟ್ಟು ಅವರು ರಾಜೀನಾಮೆ ಕೊಟ್ಟು ಮನೆಗೆ ಹೋಗಲಿ. ಆಗ ಅವರ ನೈತಿಕತೆಯನ್ನು ಮೆಚ್ಚಬೇಕಾಗುತ್ತದೆ. ಆದರೆ ಅದಕ್ಕೆ ಏನೂ ಇಲ್ಲ. ಎಲ್ಲ ಸಹಿಸಿಕೊಂಡು ಈ ರೀತಿ ಸಂವಿಧಾನಕ್ಕೆ ವಿರುದ್ಧವಾಗಿ ಸರ್ಕಾರ ನಡೆಸುತ್ತಿದ್ದಾರೆ. ಇಂತಹ ಸರ್ಕಾರ ಇದ್ದರೆ ಎಷ್ಟು. ಬಿಟ್ಟರೆ ಎಷ್ಟು? ನಿನ್ನೆ ನಡೆದ ಘಟನೆ ಬಗ್ಗೆ ಅವರು ಸ್ಪಷ್ಟವಾಗಿ ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಉತ್ತರ ಕೊಡಬೇಕಾಗುತ್ತದೆ. ಮುಖ್ಯ ಮಂತ್ರಿಗಳ ಹೆಸರು ಬಂದಿದೆ. ಅವರು ಅಲ್ಲಿಗೆ ಹೋಗಿದ್ದರು. ಮುಖ್ಯ ಕಾರ್ಯದರ್ಶಿಗಳೂ ಹೋಗಿದ್ದರು. ಹಿರಿಯ ಅಧಿಕಾರಿಗಳೂ ಕೂಡ ಅಲ್ಲಿಗೆ ಫೈಲ್ ತೆಗೆದುಕೊಂಡು ಹೋಗಿದ್ದರು ಎಂದರೆ ಸರ್ಕಾರ ಎಲ್ಲಿ ನಡೆಯುತ್ತಿದೆ? ಸರ್ಕಾರ ಇವತ್ತು ವಿಧಾನಸೌಧದಲ್ಲಿ ನಡೆಯುತ್ತಿದೆಯೋ ಅಥವಾ ಬೇರೆ ಹೊರಗಡೆ ನಡೆಯುತ್ತಿದೆ? ಸಂವಿಧಾನಬದ್ಧವಾಗಿ ಯಾರಿಗೆ ಅಧಿಕಾರ ಇದೆ ಅವರು ಸರ್ಕಾರ ನಡೆಸುತ್ತಿದ್ದಾರೆ

ಅಥವಾ ಬೇರೆಯವರು ಅಧಿಕಾರ ನಡೆಸುತ್ತಿದ್ದಾರೆ. ಇದರ ಬಗ್ಗೆ ಕೂಲಂಕುಷವಾಗಿ ತನಿಖೆ ಆಗಬೇಕಾಗಿದೆ. ಮುಖ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಈ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್; ಮಾನ್ಯ ಅಧ್ಯಕ್ಷರೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವ ಪೂರ್ವದಲ್ಲಿ ನಾನು ಒಂದು ಅಬ್ಜೆಕ್ಷನ್ ರೈಸ್ ಮಾಡಿದ್ದೇನೆ. ಇದು ಯಾವ ನಿಯಮದಲ್ಲಿ ಚರ್ಚೆ ನಡೆದಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಎಲ್ಲ ಮುಗಿದು ಉತ್ತರ ಕೊಡುವ ಸಮಯದಲ್ಲಿ ಯಾವ ನಿಯಮ ಎಂದರೆ ಹೇಗೆ?

ಶ್ರೀ ಸಿ. ಚನ್ನಿಗಪ್ಪ: ಅವರು ಹೇಳಿದ್ದು ಕೇಳಿ. ಮಾನ್ಯ ಉಪಾಧ್ಯಕ್ಷರೆ...

ಶ್ರೀ ಆಲ್ಕೋಡ್ ಹನುಮಂತಪ್ಪ: ಯಾವ ನಿಯಮಾವಳಿಯಲ್ಲಿ ಇದನ್ನು ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡುತ್ತೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ನಿಮಗೆ ಕೇಳುತ್ತೇವೆ. ಈ ನಿಯಮಾವಳಿಗಳೆಲ್ಲವೂ ಸದನದ ಕಾರ್ಯಕಲಾಪ ಸುಸೂತ್ರವಾಗಿ ನಡೆಯಬೇಕೆಂದು ನಾವೇ ಮಾಡಿಕೊಂಡಿರುವುದು. ಎಲ್ಲ ನಿಯಮಗಳನ್ನು ತೂರಿ ಬೆಳಿಗ್ಗೆ ಆದ ತಕ್ಷಣ ಇಡೀ ರಾಜ್ಯದ ಐದು ಕೋಟಿ ಜನ ಗಾಬರಿ ಪಡುವ ಘಟನೆ ಇಲ್ಲಿ ನಡೆದಾಗ ಪ್ರತಿ ಪಕ್ಷದಲ್ಲಿ ನೀವೇ ಇದ್ದರೂ ಈ ಕೆಲಸ ಮಾಡಬೇಕಾಗುತ್ತದೆ. ಮೊನ್ನೆ ಬಜೆಟ್ ಮಂಡನೆ ಮಾಡುವಾಗ ಸಿದ್ದರಾಮಯ್ಯನವರು ಬಂದರು. ನಿಮ್ಮ ಸದಸ್ಯರೇ ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಉಪ ಮುಖ್ಯ ಮಂತ್ರಿಗಳನ್ನು ತಡೆ ಹಿಡಿದರು. ಮಾನ್ಯ ಸಿದ್ದರಾಮಯ್ಯನವರೇ ಪೋಲೀಸ್ ಇಲಾಖೆಗೆ ಛೀಮಾರಿ ಹಾಕಿದರು. ನೀವೇನು ಕತ್ತೆ ಕಾಯುತ್ತಿದ್ದೀರಾ ಎಂದು ಕೇಳಿದರು. ಈ ಪರಿಸ್ಥಿತಿ ನಿಮ್ಮ ಆಡಳಿತ ಪಕ್ಷದಲ್ಲಿ ಬಂದಿದೆ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯದ ಜನತೆ ನಿಮ್ಮ ಕೈಯಲ್ಲಿ ಕೊಟ್ಟಿರುವ ಟ್ರೆಜರಿ ಸೇಫಾ? ಆಸ್ತಿಪಾಸ್ತಿಗಳು ಸೇಫ್ ಆಗುತ್ತದಾ? ಅದಕ್ಕಾಗಿ ಇವತ್ತು ಪ್ರತಿಯೊಂದು ಕ್ಷಣ ಕ್ಷಣಕ್ಕೆ ನಡೆಯುತ್ತಿರುವ ಘಟನೆಗಳು ಅಭಿವೃದ್ಧಿ ಕಾರ್ಯದ ಕಡೆ ಗಮನ ಕೊಡದೆ....

ಶ್ರೀ ಸಿದ್ದರಾಮಯ್ಯ: ಟ್ರೆಜರಿ ಮಾತ್ರ 200 ಪರ್ಸೆಂಟ್ ಸೇಫ್ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : 200 ಪರ್ಸೆಂಟ್ ಸರಿ ಇದೆ. ಆದರೆ ಎಲ್ಲಿಗೆ ಹೋಗುತ್ತಿದೆ ಯಾರ ಜೇಬು ಸೇರುತ್ತಿದೆ ಎಂದು ಗೊತ್ತಿಲ್ಲ. ಕಳೆದ 8–9 ತಿಂಗಳುಗಳಿಂದ ಅಭಿವೃದ್ಧಿ ಕಾರ್ಯ ಬಿಟ್ಟು ಕೇವಲ ಹಣ ಮಾಡುವುದರಲ್ಲಿ

ತೊಡಗಿದ್ದಾರೆಂದು ಜನ ಮಾತನಾಡುತ್ತಿದ್ದಾರೆ. ಇನ್ನು ಒಂದು ದಿನ ನೀವು ಮುಂದುವರೆದರೆ ಇನ್ನು ಕೋಟ್ಯಾಂತರ ರೂಪಾಯಿಗಳು ನಿಮ್ಮ ಜೇಬು ಸೇರುತ್ತದೆ ಎನ್ನುವ ಭಯ ಜನರಿಗೆ ಕಾಡುತ್ತಿರುವ ಸಂದರ್ಭ. ಅಂತಹ ಸಂದರ್ಭದಲ್ಲಿ ನೀವು ಅಧಿಕಾರದಲ್ಲಿ ಮುಂದುವರೆಯುವಂತಹ ನೈತಿಕ ಹಕ್ಕು ಇಲ್ಲವೆಂದು ಹೇಳುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಯಡಿಯೂರಪ್ಪನವರು. ಹಿರಿಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರು. ಶ್ರೀಮಾನ್ ಮಾಧುಸ್ವಾಮಿಯವರು ಮತ್ತು ಈಶ್ವರಪ್ಪನವರು ಜಯಪ್ರಕಾಶ್ ಹೆಗ್ಡೆಯವರೂ ಮತ್ತು ಶ್ರೀಮಾನ್ ಜಗದೀಶ್ ಶೆಟ್ಟರ್‌ರವರು ಇವರೆಲ್ಲರೂ ಪತ್ರಿಕೆಗಳಲ್ಲಿ ಬಂದಿರತಕ್ಕಂತಹ ಒಂದು ವರದಿ ಆಧಾರದ ಮೇಲೆ ಇಷ್ಟೆಲ್ಲಾ ವಿಷಯಗಳನ್ನು ಊಹಾಪೋಹಗಳನ್ನು ಮಾಡಿದ್ದಾರೆ. ಇದು ಊಹಾಪೋಹಗಳು ಅಲ್ಲದೆ ಮತ್ತೊಂದು ಅಲ್ಲ. ರಾಜೀನಾಮೆ ಕೊಡುವ ಪ್ರಶ್ನೆ ಉದ್ಭವವಾಗುವುದಿಲ್ಲ. ನಾವು ಯಾರೂ ರಾಜೀನಾಮೆ ಕೊಡುವುದಕ್ಕೆ ಇಲ್ಲಿ ಬಂದಿಲ್ಲ. ನೀವು ಎಷ್ಟೇ ಒತ್ತಾಯ ಮಾಡಿದರೂ ನಾವು ರಾಜೀನಾಮೆ ಕೊಡುವುದಿಲ್ಲ. ನಿಮ್ಮ ಪಾರ್ಟಿಯವರೇ ಹೇಳುತ್ತಾರೆ. ನಮಗೆ ಚುನಾವಣೆ ಬೇಡ ನಡೆದುಕೊಂಡು ಹೋಗಿ ಎಂದು ಹೇಳುತ್ತಾರೆ. ಇದು ವಾಸ್ತವಾಂಶ. ರಾಜೀನಾಮೆ ಕೊಟ್ಟರೆ ನಮ್ಮ ಎಲೆಯಲ್ಲಿ ನೊಣ ಇರತಕ್ಕಂಥದ್ದು ನಿಜ. ನಿಮ್ಮ ಎಲೆಯಲ್ಲಿ ಏನಿದೆ ಎಂದು ಸ್ವಲ್ಪ ಯೋಚನೆ ಮಾಡಿ. ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್; ನಿಮ್ಮ ಎಲೆಯಲ್ಲಿ ಹೆಗ್ಗಣ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಜಗದೀಶ್‌ರವರೇ ಸಂಸದೀಯ ನಡವಳಿಕೆಯಲ್ಲಿ ತಾವು ಬಹಳ ಅನುಭವಸ್ತರು. ನಿಮ್ಮ ತಂದೆಯವರೂ ಬಹಳ ಅನುಭವಸ್ತರು. ಇಲ್ಲಿ ಬರದೆ ಇರಬಹುದು ಆದರೆ ಬಹಳ ಅನುಭವಸ್ತರು. ನಿಮಗೆ ಎಲ್ಲಾ ವಿವರಗಳು ಗೊತ್ತಿವೆ. ನೀವು ಒಂದು ಕೊಟ್ಟರೆ ನಾವು ಎರಡು ಕೊಡುತ್ತೇವೆ. ಅದನ್ನು ಸ್ವಲ್ಪ ಸಮಾಧಾನದಿಂದ ತೆಗೆದುಕೊಳ್ಳಬೇಕಾಗುತ್ತದೆ. ಚುನಾವಣೆಯ ವಿಚಾರ ರಾಜೀನಾಮೆ ವಿಚಾರ ಬಂದಂತಹ ಸಂದರ್ಭದಲ್ಲಿ ನಿಮಗೆ ಏನಿದೆ ನಾನು ಹೆಗ್ಗಣ ಎಂದು ಹೇಳಲಿಲ್ಲ. ನಮ್ಮಲ್ಲಿ ನೊಣ ಇರತಕ್ಕಂಥದ್ದು ನಿಜ. ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಸಮ್ಮಿಶ್ರ ಸರ್ಕಾರ ಬಂದಿದೆ. ನಮ್ಮ ಪಕ್ಷಕ್ಕೆ ಬಹುಮತ ಬಂದಿದ್ದರೆ ಅಥವಾ ಕಾಂಗ್ರೆಸ್ ಪಕ್ಷಕ್ಕೆ ಬಹುಮತ ಬಂದಿದ್ದರೆ ಅದು ಬೇರೆ ಆಗುತ್ತಿತ್ತು. ನಾವು ಏನು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ ಅದು ಎಲ್ಲವು ಕಾರ್ಯಗತ ಮಾಡಲಿಕ್ಕೆ ಕಾಂಗ್ರೆಸ್‌ನವರಿಗೂ ಅವಕಾಶವಾಗುವುದು. ಅಥವಾ ನಮಗೂ ಅವಕಾಶ ಆಗುವುದು.

ಜನ ತೀರ್ಮಾನ ಕೊಡಲಿಲ್ಲ ಅದರಿಂದಾಗಿ ಅನಿವಾರ್ಯವಾಗಿ ನಾವು ಕಾಂಗ್ರೆಸ್‌ನವರು ಸೇರಿ ಆಡಳಿತ ನಡೆಸುತ್ತಿದ್ದೇವೆ. ಇದರಲ್ಲಿ ಇಷ್ಟೊಂದು ಸುಲಭವಾಗಿ ನಿಮ್ಮಲ್ಲಿ ಏನೋ ಭಿನ್ನಭಿಪ್ರಾಯ ಬಂದು ಬಿಟ್ಟಿದೆ. ನೀವು ಬಹಳ ದೊಡ್ಡದಾಗಿ ಸರ್ಕಾರದ ಆಸ್ತಿಪಾಸ್ತಿಗಳನ್ನು ಲೂಟಿ ಮಾಡುವುದಕ್ಕೆ ಹೊರಟ್ಟಿದ್ದೀರಿ ಇದು ಸತ್ಯಕ್ಕೆ ದೂರವಾಗಿರತ್ತಕಂತಹ ವಿಚಾರ. ಸತ್ಯವಾಗಿ ಹೇಳುತ್ತೇನೆ. ಪ್ರಾಮಾಣಿಕವಾಗಿ ಹೇಳುತ್ತೇನೆ. ಪುಸ್ತಕ ಮುಚ್ಚಿ ಹೇಳುತ್ತೇನೆ, ಇನ್ನು ಏನು ಮುಟ್ಟಬೇಕು ಹೇಳಿ ನಾನು ಮುಟ್ಟುತ್ತೇನೆ. ಪುಸ್ತಕ ಹಿಡಿದುಕೊಂಡು ಹೇಳುತ್ತಿದ್ದೇನೆ. ಪತ್ರಿಕೆಗಳಲ್ಲಿ ಬಂದಿರುವುದು ಪೂರ್ಣ ಸತ್ಯ ಅಲ್ಲ. ಸಭೆ ನಡೆದಿರತಕ್ಕಂಥದ್ದೂ. ಮಾನ್ಯ ಮುಖ್ಯಮಂತ್ರಿಗಳು. ಶ್ರೀಮಾನ್ ದೇವೇಗೌಡರು ನಮ್ಮ ನಾಯಕರು. ಮತ್ತು ನಾವು ಭೇಟಿ ಮಾಡಿರುವುದು ನಿಜ. ಆದ್ದರಿಂದ ಪತ್ರಿಕೆಗಳಲ್ಲಿ ಬಂದಿರುವಂಥದ್ದು ಎಲ್ಲ ಸುಳ್ಳು ಎಂದು ನಾನು ಹೇಳುವುದಕ್ಕೆ ತಯಾರಿಲ್ಲ. ಪತ್ರಿಕೆಗಳಲ್ಲಿ ಬಂದಿರತಕ್ಕಂಥದ್ದು ಸ್ವಲ್ಪ ಮಟ್ಟಿಗೆ ನಾವು ಭೇಟಿ ಮಾಡಿರುವಷ್ಟು ಮಟ್ಟಕ್ಕೆ ನಿಜ. ಇದು ಮೊದಲನೆಯದು. ಸಿದ್ದರಾಮಯ್ಯನವರು ಅಲ್ಲಿ ಎಲ್ಲೋ ಬಂದರು ಅರ್ಧ ದಾರಿಯಲ್ಲಿ ವಾಪಸ್ ಹೊರಟು ಹೋದರು ಎನ್ನುವುದು ಸತ್ಯಕ್ಕೆ ದೂರವಾಗಿರತಕ್ಕಂತಹ ವಿಚಾರ. ಅವರು ಆ ಕಡೆ ಬರಲೂ ಇಲ್ಲ. ಬಹುಶಃ ಅವರಿಗೆ ಈ ಸಭೆ ಇದೆ ಎಂದು ಗೊತ್ತಿದೆಯೋ ಅದು ಗೊತ್ತಿಲ್ಲ. ನನಗೆ ಗೊತ್ತಿರುವ ಹಾಗೆ ಅವರಿಗೆ ಗೊತ್ತಿರಲಿಲ್ಲ. ಸಿದ್ದರಾಮಯ್ಯನವರು ಆ ಸಭೆಗೆ ಬಂದಿರಲಿಲ್ಲ. ಯಡಿಯೂರಪ್ಪನವರು ಸ್ವಲ್ಪ ಹೇಳಿ ಉತ್ತರ ಕೊಡುವುದಕ್ಕೂ ಬಿಡುವುದಿಲ್ಲವಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ; ಮಾನ್ಯ ಸಿದ್ದರಾಮಯ್ಯನವರಿಗೆ ಕರೆದಿರಲಿಲ್ಲ. ಸಿದ್ದರಾಮಯ್ಯನವರು ಧರ್ಮಸಿಂಗ್‌ರವರು ಒಂದಾಗುತ್ತಿರುವುದು ಈ ಪರಿಸ್ಥಿತಿಗೆ ಕಾರಣ ಎಂದು ಅವರು ಹೇಳಿದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಅವೆಲ್ಲಾ ನಿಮ್ಮ ಊಹೆ. ಒಂದು ಕಡೆ ಹೇಳುತ್ತೀರಿ. ನೀವಿಬ್ಬರೂ ಕಚ್ಚಾಡುತ್ತೀರಿ ಎಂದು. ಇನ್ನೊಂದು ಕಡೆ ಹೇಳುತ್ತೀರಿ ನೀವಿಬ್ಬರೂ ಒಂದಾಗುವುದಕ್ಕೆ ಬಿಟ್ಟಿದ್ದೀರಿ ಎಂದು. ಮಾನ್ಯ ಸಿದ್ದರಾಮಯ್ಯನವರು ನಮ್ಮ ಶಾಸಕಾಂಗ ಪಕ್ಷದ ನಾಯಕರು. He is the leader of J.D(S) party and Dharamsingh is the leader of Congress party. They have to be together.

ಶ್ರೀ ಬಿ.ಎಸ್.ಯಡಿಯೂರಪ್ಪ; ಮಾನ್ಯ ಧರ್ಮಸಿಂಗ್‌ರವರ ಜೊತೆ ಕೈ ಜೋಡಿಸುತ್ತಿರುವುದು ಈ ಸಮಸ್ಯೆಗೆ ಕಾರಣ ಎಂದು ಹೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಅವರ ಸ್ಥಾನಕ್ಕೆ ಚ್ಯುತಿ ಬಂದಿಲ್ಲ. ನಿಮ್ಮ ಸ್ಥಾನಕ್ಕೆ ಚ್ಯುತಿ ಬರದೆ ಇರುವ ಹಾಗೆ ನೀವು ನೋಡಿಕೊಳ್ಳಿ. ಸದ್ಯದಲ್ಲಿ ಆಮೇಲೆ ನೋಡೋಣ. ಪಾಪ ನೀವು ಹೋರಾಟಗಾರರು. ಬಿಜೆಪಿ ಈ ಸ್ಥಿತಿಗೆ ಬರಬೇಕಾದರೆ ಕರ್ನಾಟಕದಲ್ಲಿ ಬಹಳ ಹೋರಾಟ ಮಾಡಿದ್ದೀರಿ. ನಾಲ್ಕು ಸೀಟ್ ಇದ್ದದ್ದು 70 ಸೀಟ್‌ಗೆ ತೆಗೆದುಕೊಂಡು ಬಂದಿದ್ದೀರಿ. ಮಾನ್ಯ ಸಿದ್ದರಾಮಯ್ಯನವರು ಬಂದಿರಲಿಲ್ಲ ಅದು 100ಕ್ಕೆ 100 ಸತ್ಯ. ಪತ್ರಿಕಾಕರ್ತರಿಗೆ ಸೇರಿಸಲಿಲ್ಲ. ಪತ್ರಿಕಾಕರ್ತರಿಗೆ ಸೇರಿಸತಕ್ಕಂತಹ ಅವಶ್ಯಕತೆ ಇಲ್ಲ. ಎಲ್ಲಾ ಸಂದರ್ಭಗಳಲ್ಲಿ ಸಹಿತ ಪತ್ರಿಕಾಕರ್ತರಿಗೆ ನಾವು ಸೇರಿಸುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಅನೇಕ ವಿಚಾರಗಳು ಇರುತ್ತವೆ. ಚರ್ಚೆ ಮಾಡಬೇಕಾಗುತ್ತದೆ. ಅವರನ್ನು ಸೇರಿಸದೆ ಇರುವುದು ನಿಜ. ನಾವು ಯಾರಿಗೂ ಪತ್ರಿಕೆಯವರಿಗೆ ಬನ್ನಿ ಎಂದು ಹೇಳಲಿಲ್ಲ, ಆದರೂ ಸಹ ನಮ್ಮ ವಿಷುಯಲ್ ಮೀಡಿಯಾದವರು ಬಂದು ನಾವೆಲ್ಲಾ ಹೊರಗಡೆ ಬಂದಿದ್ದು. ಒಳಗಡೆ ಹೋಗಿದ್ದು. ಇವೆಲ್ಲಾ ತೆಗೆದುಕೊಳ್ಳುತ್ತಿದ್ದರು. ಯಾವುದೇ ವ್ಯವಹಾರ ಕುದುರಿಸುವುದಕ್ಕೆ ನಾವು ಅಲ್ಲಿ ಸೇರಲಿಲ್ಲ. ಅದನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ. ಮಾನ್ಯ ಯಡಿಯೂರಪ್ಪನವರು ಉಪ ಚುನಾವಣೆ ಬರುತ್ತಿದೆ. ಎರಡು ಪಾರ್ಟಿಯವರು ಖಜಾನೆ ಲೂಟಿ ಹೊಡೆದು 100-100 ಕೋಟಿ ರೂಪಾಯಿ ಹಂಚಿಕೊಳ್ಳವುದಕ್ಕೆ ಮಾಡುತ್ತಿದ್ದಾರೆ ಎಂದು ಹೇಳುವುದು ಯಡಿಯೂರಪ್ಪನವರ ಆಪಾದನೆ ಅಲ್ಲ ಅದು. ಆ ರೀತಿಯಲ್ಲಿ ಯಡಿಯೂರಪ್ಪನವರೇ ಆಪಾದನೆ ಮಾಡುವುದಿಲ್ಲ. ಏಕೆಂದರೆ ಮಾನ್ಯ ಯಡಿಯೂರಪ್ಪನವರೇ ಆಪಾದನೆ ಮಾಡಬೇಕಾದರೆ ಸಾಕ್ಷಿ. ಆಧಾರಗಳು. ಮುಂತಾದ ದಾಖಲೆಗಳನ್ನು ಇಟ್ಟುಕೊಂಡು ಅವರು ಆಪಾದನೆ ಮಾಡುತ್ತಾರೆ. ಆದರೆ ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ ಬೀದಿಯಲ್ಲಿ ಜನರು ನಿಂತುಕೊಂಡು ಈ ರೀತಿ ಮಾತನಾಡುತ್ತಿದ್ದರು ಎಂದು ಹೇಳುತ್ತಾರಷ್ಟೆ. ಬೀದಿಯಲ್ಲಿ ಜನರು ಆ ರೀತಿ ಮಾತನಾಡುತ್ತಾರೆ ಎಂದು ಅವರು ಹೇಳುತ್ತಾರೆಯೇ ಹೊರತು ಅದು ನಿಜವಾಗಲೂ ಯಡಿಯೂರಪ್ಪನವರ ಆಪಾದನೆ ಅಲ್ಲ. ಆ ರೀತಿ ಇನ್ನಷ್ಟು ಅನುಮಾನ ಪಡುವ ರೀತಿಯಲ್ಲಿ ಹೇಳುತ್ತಾರೆ. ಆದರೆ ನಾನು ಹೇಳುತ್ತೇನೆ. ತಾವ್ಯಾರೂ ಯಾವ ಅನುಮಾನವನ್ನು ಪಟ್ಟುಕೊಳ್ಳಬೇಕಾಗಿಲ್ಲ. ನಿಮಗೇನಾದರೂ ಆ ರೀತಿಯಲ್ಲಿ ಸ್ಪೆಸಿಫಿಕ್ ಆಗಿ ಯಾವುದಾದರೂ ಮಂತ್ರಿಗಳ ಮೇಲೆ. ಮುಖ್ಯಮಂತ್ರಿಗಳ ಮೇಲೆ. ಸರ್ಕಾರದ ಮೇಲೆ ಅವ್ಯವಹಾರಗಳ ಬಗ್ಗೆ ಮಾಹಿತಿ ಇದ್ದರೆ ದಯವಿಟ್ಟು ತಾವು ನಮಗೆ ತಿಳಿಸಿ. ಅದರ ಬಗ್ಗೆ ಬೇಕಾದರೆ ಸಿ.ಬಿ.ಐ. ತನಿಖೆಗೂ.... ಮಾನ್ಯ ಈಶ್ವರಪ್ಪನವರು ಸಿ.ಬಿ.ಐ. ತನಿಖೆಗೆ ಕೊಡಬೇಕು ಎಂದು ಅವರು ಮಾತನಾಡುವಾಗ ಹೇಳಿದರು. ಸಿ.ಬಿ.ಐ.ಗೂ ಕೊಡಿಸುವುದಕ್ಕೆ ನಾವು ತಯಾರಿದ್ದೇವೆ. ನಮ್ಮದೇನೂ

ತಕರಾರಿಲ್ಲ. ದೇವೇಗೌಡರ ಒಂದು ರಾಜಕೀಯ ಚರಿತ್ರೆಯಲ್ಲಿ ದೇವೇಗೌಡರು ಹಿಂದೆ ಎಷ್ಟೊಂದು ಎನ್‌ಕ್ವೈರಿಗಳನ್ನು ಫೇಸ್ ಮಾಡಲಿಲ್ಲ ಹೇಳಿ. ಅವರು ಎಲ್ಲಾ ಎನ್‌ಕ್ವೈರಿಗಳನ್ನು ಫೇಸ್ ಮಾಡಿದರು. ಆದುದರಿಂದ ಇಲ್ಲಿ ಸಿ.ಬಿ.ಐ.ಗೆ ತನಿಖೆಗೆ ಕೊಡುವಂಥ ಯಾವ ಘಟನೆಯೂ ಇಲ್ಲಿ ನಡೆದಿಲ್ಲ ಎನ್ನತಕ್ಕಂಥದ್ದನ್ನು ನಾನು ಈ ಸಂದರ್ಭದಲ್ಲಿ ಇಲ್ಲಿ ಹೇಳಬಯಸುತ್ತೇನೆ. ಇನ್ನು ಅಧಿಕಾರಿಗಳು ಅಪರಾಧಿಗಳ ರೀತಿಯಲ್ಲಿ ಫೈಲ್‌ಗಳನ್ನು ಹಿಡಿದುಕೊಂಡಿದ್ದರು ಎಂದು ಹೇಳಿದ್ದಾರೆ. ಅತ್ಯಂತ ಪ್ರಾಮಾಣಿಕವಾಗಿ ನಾನು ಹೇಳುತ್ತೇನೆ. ಅಲ್ಲಿ ಅಧಿಕಾರಿಗಳ ಸಭೆ ಇದ್ದದ್ದು ನಿಜ. ಆದರೆ ದೇವೇಗೌಡರು ಇದ್ದಾಗ ಅಲ್ಲ. ಇವೊತ್ತು ಕೌನ್ಸಿಲ್‌ನಲ್ಲಿ ಪ್ರಶ್ನೋತ್ತರ ಕಲಾಪ ಇದೆ. ಸುಮಾರು 19 ರಿಂದ 20 ಇಲಾಖೆಯ ಅಧಿಕಾರಿಗಳು ಅಲ್ಲಿ ಚೀಫ್ ಮಿನಿಸ್ಟರ್‌ಗೆ ಬ್ರೀಫ್ ಮಾಡುವುದಕ್ಕೆ ಬಂದಿದ್ದರು. ಏಕೆಂದರೆ ಇವೊತ್ತು 9 ಗಂಟೆಗೆ ಕ್ಯಾಬಿನೆಟ್ ಮೀಟಿಂಗ್ ಇದ್ದುದ್ದರಿಂದ ಇಂದೇ ಬೆಳಿಗ್ಗೆ ಚೀಫ್ ಮಿನಿಸ್ಟರ್‌ಗೆ ಬ್ರೀಫ್ ಮಾಡುವುದಕ್ಕೆ ಆಗುವುದಿಲ್ಲವಾದ ಕಾರಣ ನಿನ್ನೆ ರಾತ್ರಿಯಲ್ಲಿಯೇ ಬ್ರೀಫ್ ಮಾಡುವುದಕ್ಕೆ ಅಧಿಕಾರಿಗಳು ಅಲ್ಲಿಗೆ ಬಂದಿದ್ದರು. ಅವರೆಲ್ಲರೂ ಒಂದು ಗಂಟೆಗಳ ಕಾಲ ಅಲ್ಲಿ ಇದ್ದರು.

ಶ್ರೀ ವಾಟಾಳ್ ನಾಗರಾಜ್: ಹಾಗೇನಿಲ್ಲ ಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಇದನ್ನು ನೀವು ನಂಬಬೇಕು. ಮಾನ್ಯ ಉಪಾಧ್ಯಕ್ಷರೆ. ಸತ್ಯ ಇರುವುದನ್ನು ಬಿಟ್ಟು ಇನ್ನೇನನ್ನು ನಾನು ಹೇಳುವುದಕ್ಕೆ ಸಾಧ್ಯವಿದೆ ಹೇಳಿ. ಸತ್ಯವಾಗಿರತಕ್ಕಂಥದ್ದನ್ನು ನಾನು ಹೇಳುತ್ತೇನೆ ಎಂದರೆ ಇವರು ತಲೆ ಅಲ್ಲಾಡಿಸಿದರೆ ಹೇಗೆ ಹೇಳಿ.

ಉಪಾಧ್ಯಕ್ಷರು:- ನೀವು ಆ ಕಡೆ ನೋಡಲೇಬೇಡಿ. ನೀವು ನನ್ನ ಕಡೆ ನೋಡಿಕೊಂಡು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಆ ಕಡೆ ನೋಡದೇ ಇರುವುದಕ್ಕಾಗುವುದಿಲ್ಲ. ಆ ಕಡೆ ನೋಡಲೇಬೇಕಾಗುತ್ತದೆ. ಏಕೆಂದರೆ ಅವರ ಮುಖಗಳು ಚೆನ್ನಾಗಿವೆ. ಆದ್ದರಿಂದ ನೋಡಬೇಕಾಗುತ್ತದೆ. ನಗುನಗುತ್ತಾ ಕುಂಕುಮ ಹಾಕಿಕೊಂಡು ಬಂದಿದ್ದಾರೆ ಕೆಲವರು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಸಿಂಧ್ಯಾರವರೆ. ನಿಮ್ಮ ಪಾತ್ರವನ್ನು ನೋಡಿ ತಮಗೆ ನಟ ಭಯಂಕರ ಎನ್ನುವ ಬಿರುದನ್ನು ನಾನು ತಮಗೆ ಈಗ ನೀಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಪರವಾಗಿಲ್ಲ. ನನಗೆ ಇವರು ನಟ ಭಯಂಕರ ಎನ್ನುವ ಬಿರುದನ್ನು ಕೊಟ್ಟರೆ ನನಗೇನೂ ಬೇಜಾರಿಲ್ಲ. ನಾನು ಸಾಮಾನ್ಯವಾಗಿ ಇದುವರೆಗೂ ಇಂದ್ರನ ಪಾತ್ರವನ್ನು ನಮ್ಮ ನಾಟಕಗಳಲ್ಲಿ ವಹಿಸುತ್ತಿದ್ದೆ. ಇನ್ನು ಮುಂದೆ ತಮ್ಮ ಸಲಹೆಯ ಮೇರೆಗೆ ನಟ ಭಯಂಕರ ಎಂದರೆ ದುರ್ಯೋಧನನೇ?

ಶ್ರೀ ಜೆ.ಸಿ. ಮಾಧುಸ್ವಾಮಿ:- ರಾವಣನೂ ಆಗಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ರಾವಣಾಸುರನ ಪಾತ್ರವನ್ನೇ ವಹಿಸುತ್ತೇನೆ. ನನಗೇನೂ ತಕರಾರಿಲ್ಲ. ನಿಮ್ಮನ್ನು ಸಂಹಾರ ಮಾಡುವುದಕ್ಕೆ ನಾನು ಯಾವ ಪಾತ್ರ ಬೇಕಾದರೂ ವಹಿಸಿಕೊಳ್ಳುವುದಕ್ಕೆ ನಾನು ತಯಾರಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ :- ರಾವಣನೇ ಸಂಹಾರವಾಗಿರುವುದರಿಂದ ಆ ಪಾತ್ರವೂ ಕೂಡ ತಾಪತ್ರಯವೇ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಆಯಿತು. ಆಯಿತು. ನೋಡುತ್ತಿದ್ದೇವೆಲ್ಲ ದಿನಾ ಪತ್ರಿಕೆಗಳಲ್ಲಿ ಜ್ಞಾನೇಂದ್ರರವರೆ. ನೋಡುತ್ತಾ ಇದ್ದೇವಲ್ಲ ಪತ್ರಿಕೆಗಳಲ್ಲಿ.

ಶ್ರೀ ವಾಟಾಳ್ ನಾಗರಾಜ್;- ಸಂಹಾರ ಮಾಡುವುದಕ್ಕೆ ರಾವಣನೂ ಅಲ್ಲ. ದುರ್ಯೋಧನನು ಅಲ್ಲ. ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ರಾವಣನ ಪಾತ್ರಧಾರಿ ಸಂಹಾರ ಮಾಡುವುದಕ್ಕೆ ಆಗುವುದಿಲ್ಲ. ದುರ್ಯೋಧನನ ಪಾತ್ರವೂ ಸಂಹಾರ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಇವರಿಬ್ಬರೂ ಸಂಹಾರ ಮಾಡಿಸಿಕೊಳ್ಳುವುದಕ್ಕೆ ಸಿಕ್ಕಿದಂಥವರೇ ಆಗಿದ್ದಾರೆ. ಆದುದರಿಂದ ತಾವು ಸಂಹಾರಕ್ಕೆ ಸಿಕ್ಕಿದ್ದೀರಿ. ಆದರೆ ನೀವು ಇನ್ಯಾರನ್ನೋ ಸಂಹಾರ ಮಾಡುವ ಮಟ್ಟದಲ್ಲಿ ಇಂದು ಇಲ್ಲಿ ನೀವು ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ವಾಟಾಳ್‌ರವರೆ. ಆ ರೀತಿ ಬರೋದಿಲ್ಲ ಬಿಡಿ. ಮಾನ್ಯ ಉಪಾಧ್ಯಕ್ಷರೆ. ನಾನು ಹೇಳುತ್ತಿದ್ದೇನೆ. ನಿನ್ನೆಯ ದಿವಸ ಯಾವ ಅಧಿಕಾರಿಗಳೂ ಕೂಡ ಫೈಲ್‌ಗಳನ್ನು ತೆಗೆದುಕೊಂಡು ಅಲ್ಲಿಗೆ ಬಂದಿರಲಿಲ್ಲ. ನೀವು ಇದನ್ನು ನಂಬಬೇಕು. ನೀವುಗಳು ನಂಬದೇ ಹೋದರೆ ನಾನೇನು ಮಾಡುವುದಕ್ಕಾಗುವುದಿಲ್ಲ. ಮುಖ್ಯಮಂತ್ರಿಗಳಿಗೆ ಬ್ರೀಫ್ ಮಾಡುವುದಕ್ಕೆ 7-30 ಕ್ಕೆ ಬರುವುದಕ್ಕೆ ಅವರಿಗೆ ಹೇಳಲಾಗಿತ್ತು. ಆ ರೀತಿಯಲ್ಲಿ ಅವರುಗಳು ರಾತ್ರಿ 7-30 ರಿಂದ 9 ಗಂಟೆಯವರೆಗೂ ಬ್ರೀಫ್ ಮಾಡಿ ತದನಂತರ ಅವರುಗಳು ಹೋಗಿರತಕ್ಕಂಥದ್ದು ಸತ್ಯಾಂಶ.

ಶ್ರೀ ಜೆ.ಸಿ. ಮಾಧುಸ್ವಾಮಿ;- ಇದು ಸತ್ಯವಲ್ಲ ಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- No. I am telling you very honestly.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಿನ್ನೆ ಮಧ್ಯಾಹ್ನವೇ ಕ್ಯಾಬಿನೆಟ್ ಮುಂದೂಡಿದ ವಿಷಯ ಗೊತ್ತಾಗಲಿಲ್ಲವೇ ಸಾರ್.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಇಲ್ಲಾರೀ. ನಾನು ಹೇಳಿದ್ದನ್ನು ತಾವು ನಂಬಬೇಕು. ನಂಬದಿದ್ದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ. I cannot help it if you don't believe me. ನಾನು ಇರತಕ್ಕಂಥ ಸತ್ಯಾಂಶದ ವಿಚಾರವನ್ನು ಇಲ್ಲಿ ಹೇಳಲೇಬೇಕಾಗುತ್ತದೆ. ಅದು ಆದಮೇಲೆ ಕ್ಯಾಬಿನೆಟ್‌ನ್ನು ಮುಂದೆ ಹಾಕಲು ಸೂಚನೆಯನ್ನು ಕೊಟ್ಟಿದ್ದು. ಆದರೆ ನಿನ್ನೆ ಸಾಯಂಕಾಲ 7-30ಕ್ಕೆ ಬ್ರೀಫಿಂಗ್ ಮಾಡಲು ಕರೆದದ್ದು. ಇದು ಮೊದಲನೆಯದಾಗಿ ನಾನು ಹೇಳುವಂಥದ್ದು. ಇನ್ನು ತಾವೇನು ಅಧಿಕಾರಿಗಳು ಫೈಲ್‌ಗಳನ್ನು ಇಟ್ಟುಕೊಂಡು ಅಪರಾಧಿ ಸ್ಥಾನದಲ್ಲಿ ನಿಂತುಕೊಂಡಂತೆ ಇದ್ದರು ಎನ್ನುವ ಬಗ್ಗೆ ಹೇಳುತ್ತಿದ್ದೀರಿ ಅದು ಸತ್ಯಕ್ಕೆ ದೂರವಾದಂಥ ವಿಚಾರವಾಗಿದೆ. ಇನ್ನು ತಾವು ಹೇಳಿದಿರಿ. ಸಿಂಧ್ಯಾರವರೇನೋ ಕೈಗಾರಿಕಾ ಮಂತ್ರಿಗಳಾಗಿ ಕಿರ್ರೋ ಮರ್ರೋ ಎಂದು ಹೇಳಿ ನಿಂತುಕೊಂಡಿದ್ದರು ಎಂದಿದ್ದೀರಿ. ನೀವು ಮಾತನಾಡುವಾಗ ಹೇಳಿದ್ದನ್ನು ನಾನು ಇಲ್ಲಿ ಬರೆದುಕೊಂಡಿದ್ದೇನೆ. ಅದೇನು ಕಿರ್ರೋ ಮರ್ರೋ ಎಂದು ಹೇಳಿದಿರಿ ಅದು ನನಗರ್ಥವಾಗುತ್ತಿಲ್ಲ. ಕಿರ್ರೋ ಮರ್ರೋ ಎನ್ನುವುದನ್ನು ಮಕ್ಕಳು ಆಡುತ್ತಾರೆ. ಮಾನ್ಯ ಯಡಿಯೂರಪ್ಪನವರೇ. ನನಗೆ ನಿಮ್ಮಷ್ಟು ಅನುಭವ ಇಲ್ಲದೇ ಇದ್ದರೂ ಸಹಿತ ನಾನು ಅಸೆಂಬ್ಲಿಯಲ್ಲಿ ನನ್ನ ಕ್ಷೇತ್ರದ ಜನರಿಗೆ ಅವಮಾನ ಮಾಡುವುದಕ್ಕೆ ನಾನು ತಯಾರಿಲ್ಲ. ನಾನು ರಾಜಕಾರಣದಲ್ಲಿ ಕಿರ್ರೋ ಮರ್ರೋ ಎಂದು ನಿಂತುಕೊಳ್ಳುವ ಪರಿಸ್ಥಿತಿ ಬರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ:- ತಾವು ಮಾತನಾಡುವಾಗ ಪ್ರಶ್ನಾತೀತರು ಎಂದು ಹೇಳಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾನು ಅದನ್ನೇ ಹೇಳುವುದಕ್ಕೆ ಹೊರಟಿದ್ದೇನೆ. ಇವೊತ್ತು ಅದನ್ನೇ ಹೇಳುವುದಕ್ಕೆ ಹೊರಟಿದ್ದೇನೆ. you are not allowing me to speak. ನಾನು ಕಿರ್ರೋ ಮರ್ರೋ ಎಂದು ನೀವು ಹೇಳತಕ್ಕಂಥದ್ದು ಪತ್ರಿಕೆಗಳಲ್ಲಿ ವರದಿಯಾಗಿದೆ. ಕನಕಪುರದಲ್ಲಿ ಇಂಡಸ್ಟ್ರೀಯಲ್ ಎಸ್ಟೇಟ್ ಎಂದು ಸಿಂಧ್ಯಾರವರು ಮಾಡುವುದಕ್ಕೆ ಹೋಗಿದ್ದರು. ಅದಕ್ಕೋಸ್ಕರವಾಗಿ ಯಾರದೋ ಜಮೀನನ್ನು ಕೊಟ್ಟುಬಿಟ್ಟಿದ್ದಾರೆ ಎಂದು ಹೇಳಿ ಅದಕ್ಕೆ ಎಕ್ಸ್‌ಪ್ಲನೇಶನ್ ಕೊಡುವುದಕ್ಕೆ ಹೋಗಿದ್ದರು ಎನ್ನುವಂತೆ ಹೇಳಿದ್ದೀರಿ. ಯಸ್. ನಾನು ಎಲ್ಲಿ ಕನಕಪುರದಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ ಮಾಡುವುದಿಲ್ಲವೆಂದು ಹೇಳಿದ್ದೀನಿ ಹೇಳಿ. ಕನಕಪುರದಲ್ಲಿ ಇಂಡಸ್ಟ್ರಿಯಲ್

ಎಸ್ಟೇಟ್ ಮಾಡುವುದಕ್ಕೆ 500 ಎಕರೆ ಜಮೀನನ್ನು ತೆಗೆದುಕೊಳ್ಳುತ್ತಿದ್ದೇವೆ. ಆನೇಕಲ್‌ನಲ್ಲಿಯೂ 200 ಎಕರೆ ಜಮೀನನ್ನು ತೆಗೆದುಕೊಳ್ಳುತ್ತಿದ್ದೇವೆ. ರಾಮನಗರದಲ್ಲೂ ತೆಗೆದುಕೊಳ್ಳುತ್ತಿದ್ದೇವೆ. ಮಂಗಳೂರಿನಲ್ಲಿಯೂ ತೆಗೆದುಕೊಳ್ಳುತ್ತಿದ್ದೇನೆ. ಸುಮಾರು ಹತ್ತು ಹದಿನೈದು ಸಾವಿರ ಎಕರೆ ಜಮೀನನ್ನು. infact. we have to take it now because so much of investments have come. ಇವೊತ್ತು ಹುಬ್ಬಳ್ಳಿಯಲ್ಲಿ ಟೆಕ್ಸ್‌ಟೈಲ್ಸ್ ಪಾರ್ಕ ಮಾಡಬೇಕಾಗಿದೆ. ಮೈಸೂರಿನಲ್ಲಿ ಅಪೆರೆಲ್ ಪಾರ್ಕ ಮಾಡಬೇಕಾಗಿದೆ. ಹಾಸನದಲ್ಲಿ ಸ್ಪೆಶಲ್ ಎಕನಾಮಿಕ್ ಜೋನ್ ಕೊಟ್ಟಿದ್ದಾರೆ. ಗುಲ್ಬರ್ಗಾದಲ್ಲಿ ಅಪೆರಲ್ ಪಾರ್ಕ ಮಾಡಬೇಕಾಗಿದೆ. ಬಳ್ಳಾರಿಯಲ್ಲಿ ಅಪೆರಲ್ ಪಾರ್ಕ ಮಾಡಬೇಕಾಗಿದೆ. ನಂಜಂಡಪ್ಪರವರ ವರದಿಯನ್ನು ಅನುಷ್ಠಾನಗೊಳಿಸಬೇಕಾಗಿದೆ. ಬಜೆಟ್‌ನಲ್ಲಿ ದುಡ್ಡು ಕೊಟ್ಟಿದ್ದಾರೆ. ಅದರಿಂದಾಗಿ ನಾವು ಮಾಡುವುದಕ್ಕೆ ಹೊರಟಿದ್ದೇವೆ. ಅದರಲ್ಲೇನು ತಪ್ಪೇನು? ಆದರೆ ಕಿರ್‍ರೋ ಮರ್‍ರೋ ಎಂದು ನಿಂತುಕೊಂಡು ದೇವೇಗೌಡರ ಹತ್ತಿರ ಹೇಳಿದ್ದಾರೆ. ಅಂದರೆ ನೀವೆಲ್ಲರೂ ಆ ರೀತಿ ಮಾತನಾಡಿದಿರಿ ಎಂದು ನಾನು ಹೇಳಿರಲಿಲ್ಲ. ಏಕೆಂದರೆ ಕೆಲವರು ಅಂದರೆ ವಾಟಾಳ್ ನಾಗರಾಜ್‌ರವರು. ಮಾಧುಸ್ವಾಮಿಯವರು ಆ ರೀತಿಯಲ್ಲಿ ಮಾತನಾಡಲಿಲ್ಲ. ಇವರು ಹೇಳುವ ರೀತಿ ದೇವೇಗೌಡರೇನೋ ಇದರ ವಿರುದ್ಧವಾಗಿದ್ದಾರೆ. ದಯವಿಟ್ಟು ಈ ರೀತಿಯ ವಿಚಾರವನ್ನು ನಿಮ್ಮ ತಲೆಯಿಂದ ತೆಗೆದುಹಾಕಿಬಿಡಿ. ಏಕೆಂದರೆ ಅದು ಸತ್ಯವಲ್ಲ. ಇನ್ನು ಒಬ್ಬ ಚೀಫ್ ಮಿನಿಸ್ಟರ್ ಒತ್ತಾಯಕ್ಕೆ ಮಣಿದುಬಿಟ್ಟಿದ್ದಾರೆ ಎಂದು ಹೇಳಿದ್ದೀರಿ. ಇದು ಸುಳ್ಳು. ಯಾವುದೇ ಒತ್ತಡಕ್ಕೂ ಸಹಿತ ಯಾರೂ ಮಣಿಯತಕ್ಕಂಥ ಅವಶ್ಯಕತೆ ಇಲ್ಲ. ಅವರಿಗೆ ಕಾಂಗ್ರೆಸ್ ಪಾರ್ಟಿ ಹೈಕಮಾಂಡ್ ಜೆ.ಡಿ.(ಎಸ್)ಗೆ ದೇವೇಗೌಡರು ಹೈಕಮಾಂಡ್. ಕಾಂಗ್ರೆಸ್ ಪಾರ್ಟಿ ಅಧ್ಯಕ್ಷರು ಅವರಿಗೆ ಹೈಕಮಾಂಡ್ ಆದರೆ ನಮಗೆ ಜೆ.ಡಿ.(ಎಸ್)ಗೆ Devegowda is the unquestionable leader of our party. There is no doubt about it. ಅವರು ಲೋಕಸಭಾ ಸದಸ್ಯರೂ ಕೂಡ ಆಗಿದ್ದಾರೆ. ಅವರಿಗೆ ಧರ್ಮಸಿಂಗ್‌ರವರನ್ನು ಭೇಟಿ ಮಾಡತಕ್ಕಂಥ ಅವಶ್ಯಕತೆ ಇದೆ. ಅದರಲ್ಲಿ ತಪ್ಪೇನು? ಒಬ್ಬ ಲೋಕಸಭಾ ಸದಸ್ಯರು forget that he is a former prime minister. Forget that he is the President of JD(S) for a while. ಮರೆತುಬಿಡಿ ಒಂದೈದು ನಿಮಿಷ. ಸಿ.ಎಂ.ಪಿ. ಪ್ರೋಗ್ರಾಂಗಳನ್ನು ಮಾಡಿರುವುದನ್ನು ಮರೆತುಬಿಡೋಣ. As a Loksabha Member 66 ಆಗಿ ಧರ್ಮಸಿಂಗ್‌ರವರಿಗೆ ಏನಾದರೂ ಹೇಳುವುದಕ್ಕೆ ದೇವೇಗೌಡರಿಗೆ ಹಕ್ಕಿಲ್ಲವೆ?

ಧರ್ಮಸಿಂಗ್‌ರವರನ್ನು ಖಾಸಗಿಯಾಗಿ ಭೇಟಿ ಮಾಡುವುದು ತಪ್ಪೇ? ನೀವ್ಯಾರೂ ರಾತ್ರಿ 7 ಗಂಟೆಗೋ 8 ಗಂಟೆಗೋ ರಾತ್ರಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡುವುದೇ ಇಲ್ಲವೇ?

ಶ್ರೀ ಜೆ.ಸಿ. ಮಾಧುಸ್ವಾಮಿ:- ಫೈಲ್ ತರಿಸಿದ್ದು ತಪ್ಪು.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಫೈಲ್ ತರಿಸಿಲ್ಲವೆಂದು ನಾನು ಹೇಳಿದ್ದೇನಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ;- ಇಲ್ಲಿ ಇಶ್ಯೂ ಬಂದಿರುವುದು ಏನೆಂದರೆ ಫೈಲ್ ತರಿಸಿ ಅಧಿಕಾರಶಾಹಿಯನ್ನು ನಿಮ್ಮ ಕಂಟ್ರೋಲ್‌ಗೆ ಏಕೆ ತೆಗೆದುಕೊಳ್ಳುತ್ತಿದ್ದೀರಿ ಸಂವಿಧಾನಬಾಹಿರವಾಗಿ ಎಂದು ಬಂದಿರುವುದು. ಅವರನ್ನು ಭೇಟಿ ಮಾಡಿದ್ದು ತಪ್ಪು. ಅವರ ಜೊತೆ ಚರ್ಚೆ ಮಾಡಿದ್ದು ತಪ್ಪು ಎಂದು ನಾವ್ಯಾರೂ ಹೇಳಲಿಲ್ಲ. ನಿಮ್ಮನ್ನೂ ಭೇಟಿ ಮಾಡುತ್ತೇವೆ. ಆದರೆ ಫೈಲ್ ತನ್ನಿ ಎಂದು ನಾವು ಯಾರಿಗಾದರೂ ಹೇಳಿದ್ದೇವೆಯೇ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಉಪಾಧ್ಯಕ್ಷರೆ. ನಾನು ಅತ್ಯಂತ ಪ್ರಮಾಣಿಕವಾಗಿ ಹೇಳುತ್ತಿದ್ದೇನೆ. ಇವರಿಗೆ ನಾನು ಹೊಡೆದು ನನ್ನ ಎದೆಬಿಚ್ಚಿ ತೋರಿಸುವುದಕ್ಕಾಗುವುದಿಲ್ಲ. including the chief secretary. I am talking to you. no file was brought there. ಇಷ್ಟನ್ನು ನೀವು ನಂಬಲಿಲ್ಲವೆಂದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ. I cannot make you belive. ನನ್ನ ಹತ್ತಿರ ಆ ರೀತಿಯ ಮ್ಯಾಜಿಕ್‌ನ ದಂಡ ಯಾವುದು ಇಲ್ಲ. I am telling you very honestly. ನನ್ನಲ್ಲಿ ನಾನು ಎಷ್ಟು ಪ್ರಾಮಾಣಿಕವಾಗಿ ನಡೆದುಕೊಳ್ಳಬೇಕು ಎಂಬುದು ನನಗೆ ಗೊತ್ತಿದೆ. Please trust ನಾನು ಹೇಳುತ್ತಿದ್ದೇನೆ, trust me. Neither the Chief Secretary nor any Secretaries who were there had brought file except for briefing to the Chief minister. This is No.1.

ಇನ್ನು ಎರಡನೆಯ ವಿಚಾರವೇನೆಂದರೆ ತಾವು ಈ ವಿಷಯವನ್ನು ಮೂರನೆಯ ಬಾರಿ ಹೇಳುತ್ತಿದ್ದೀರಿ. ಸದನದ ಒಳಗೆ. ಸದನದ ಹೊರಗೆ ಆಪಾದನೆಯನ್ನು ನಮ್ಮ ಮೇಲೆ ಮಾಡುತ್ತಿದ್ದೀರಿ. ಅದೇನೆಂದರೆ ಹಣ ದೋಚುವುದಕ್ಕೆ ನೀವಿಬ್ಬರೂ ಒಂದಾಗಿದ್ದೀರಿ ಎಂದು ಹೇಳಿದ್ದೀರಿ. ದಯವಿಟ್ಟು ತಾವು ತಿಳಿದುಕೊಳ್ಳಬೇಕು. ತಾವು ವಿರೋಧ ಪಕ್ಷದ ನಾಯಕರಾಗಿದ್ದೀರಿ. ನಿಮ್ಮ ಪಕ್ಷದವರೇ ಪಿ.ಎ.ಸಿ. ಕಮಿಟಿ ಅಧ್ಯಕ್ಷರಾಗಿದ್ದಾರೆ. ಆ ಸಮಿತಿಯಲ್ಲಿ ನೀವು ಯಾವ ಫೈಲ್ಸ್‌ಗಳನ್ನಾದರೂ

ತರಿಸಿಕೊಳ್ಳಬಹುದು. to-day by evening you can get the file. ಮಾನ್ಯ ಈಶ್ವರಪ್ಪನವರು ಪಿ.ಎ.ಸಿ. ಕಮಿಟಿ ಅಧ್ಯಕ್ಷರಾಗಿದ್ದಾರೆ. ನಮ್ಮ ಚೀಫ್ ಸೆಕ್ರೆಟರಿಗೆ ಆಗಲಿ ಕೇಳಬಹುದು. ತಾವು ಸಬ್ ಕಮಿಟಿ ಛೇರ್ಮನ್ ಆಗಿದ್ದೀರಿ. ತಮಗೆ ಯಾವ ಫೈಲ್ ಕೊಡಿಸುವುದಕ್ಕೆ ಈ ಸರ್ಕಾರ ಒಬ್‌ಲೈಸ್ ಮಾಡಿಲ್ಲವೆಂದು ದಯವಿಟ್ಟು ನಮಗೆ ಹೇಳಿ. ನಾವೆಲ್ಲ ಫೈಲ್‌ಗಳನ್ನು ಕೊಡಿಸುವುದಕ್ಕೆ ತಯಾರಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಅದು ಸ್ಟ್ಯಾಚ್ಯುಟರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:-ಸ್ಟ್ಯಾಚ್ಯುಟರಿ ಸರಿ ಸ್ವಾಮಿ. ತರಿಸಿಕೊಂಡು ನೋಡಿ ನೀವು ಈ ರೀತಿಯಲ್ಲಿ ತಪ್ಪು ಮಾಡಿದ್ದೀರಿ ಎಂದು ನಮಗೆ ಹೇಳಿ. ಜಗತ್ತಿಗೆಲ್ಲಾ ಹೇಳಿಕೊಂಡು ಬನ್ನಿ. ನಾವೇನೂ ತಪ್ಪಿದ್ದರೆ ಇಲ್ಲ ಎಂದು ಹೇಳುವುದಿಲ್ಲ. ಇವೊತ್ತು ಹಿರಿಯರಾದ ವಾಟಾಳ್ ನಾಗರಾಜ್‌ರವರು ತಮ್ಮ ಅನುಭವದಿಂದ ಎಷ್ಟು ಮಾತನಾಡಬೇಕೋ ಅಷ್ಟನ್ನು ಮಾತನಾಡಿ ಹೇಳಿದರು. ಪತ್ರಿಕೆಗಳಲ್ಲಿ ಬಂದಿದೆ. ಅದನ್ನು ಪ್ರಸ್ತಾಪ ಮಾಡಬೇಕು. ಆ ಪ್ರಕಾರ ಅವರು ಪ್ರಸ್ತಾಪ ಮಾಡಿದ್ದಾರೆ. ವಾಟಾಳ್‌ರವರೆ, ನಿಮಗೆ ಕೆಂಪು ಕಟ್ಟಡಕ್ಕೆ ಹೋಗುವುದಕ್ಕೆ ನಾವು ಅವಕಾಶ ಮಾಡಿಕೊಡುವುದಿಲ್ಲ. ಅಂಥ ಅಪರಾಧವನ್ನು ನಾವು ಮಾಡಿಕೊಳ್ಳುವುದಿಲ್ಲ. ಇನ್ನು ಯಡಿಯೂರಪ್ಪನವರು ಸಿ.ಬಿ.ಐ.ಗೆ ವಹಿಸಬೇಕು ಎನ್ನುತ್ತಾರೆ. ಯಾವುದರ ಬಗ್ಗೆ ಸಿ.ಬಿ.ಐ.ಗೆ ವಹಿಸುವುದು. ಧರ್ಮಸಿಂಗ್‌ರವರು ಮತ್ತು ದೇವೇಗೌಡರು ಭೇಟಿ ಮಾಡಿದ್ದನ್ನು ಸಿ.ಬಿ.ಐ.ಗೆ ಕೊಡಬೇಕೆ ಅಥವಾ ಯಾವುದನ್ನು ಸಿ.ಬಿ.ಐ.ಗೆ ತನಿಖೆಗೆ ವಹಿಸಬೇಕು. ಈ ಆಪಾದಿತರು. ಆಪಾದನೆ ಮಾಡಿರತಕ್ಕಂಥವರು ಇಬ್ಬರೂ ಒಂದೇ ಆಗಿದ್ದೀರಿ ಅಂತ ಹೇಳುತ್ತಾರೆ. ಜನರು ಓಟ್ ಕೊಡಲಿಲ್ಲ ನಾವೇನೂ ಮಾಡೋಣ. ನಿಮ್ಮ ಜೊತೆ ನಾವು ಸೇರುವುದಕ್ಕೆ ಆಗುವುದಿಲ್ಲ. ನಾವಿಬ್ಬರೂ ಸೆಕ್ಯುಲರ್ ಪಾರ್ಟಿಸ್. ನಿಮ್ಮ ಜೊತೆ ನಾವು ಬರುವುದಕ್ಕೆ ಆಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ:- 1983 ರಲ್ಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- 1991 ರ ನಂತರ ದೇಶದ ರಾಜಕಾರಣವೇ ಬದಲಾಗಿದೆ. After Mandal and Masjid. things have changed.

ಶ್ರೀ ಅರಗ ಜ್ಞಾನೇಂದ್ರ:- ನಿಮಗೆ ಲಾಭ ಆಗುವುದಾದರೆ ನಾವು ಸೆಕ್ಯುಲರ್ ಆಗಿಬಿಡುತ್ತೇವೆ ನಿಮಗೆ. ನಿಮಗೆ ನಷ್ಟ ಆಗುವುದಾದರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಇಲ್ಲಿ ನೀವು ಚುನಾವಣೆಗಳಲ್ಲಿ ಸೋಲಬೇಕು ಎಂದು ನಿಂತುಕೊಳ್ಳುತ್ತೀರಾ? ಎಲ್ಲಾ ರಾಜಕೀಯ ಪಕ್ಷಗಳವರೂ ಸನ್ಯಾಸಿಳೇನೂ

ಅಲ್ಲ. ಇನ್ನು ಮಾನ್ಯ ಈಶ್ವರಪ್ಪನವರು ಮಾತನಾಡುವಾಗ ಕಳ್ಳ, ಮಳ್ಳ, ಎನ್ನುವ ಶಬ್ದವನ್ನು ಉಪಯೋಗಿಸಿ ಮಾತನಾಡಿದರು. ಇಲ್ಲಿ ಕಳ್ಳ, ಎನ್ನತಕ್ಕಂಥದ್ದು ಹೇಗೆ. ಈಶ್ವರಪ್ಪನವರೇ ನೀವು ಪಿ.ಎ.ಸಿ. ಕಮಿಟಿ ಛೇರ್ಮನ್ ಆಗಿದ್ದವರು. ಆಗಿರುವವರು. ಐ ಆಮ್ ಸಾರಿ, ಆಗಿದ್ದವರು ಎಂದುಬಿಟ್ಟೆ, ಆಗಿರುವವರು. ಮುಂದೆ ಆಗುತ್ತೀರೋ ಏನೋ ನನಗೆ ಗೊತ್ತಿಲ್ಲ. ನಿಮಗೆ ಎಲ್ಲ ಹಕ್ಕಿದೆ. as it stands today. you have got every file. ನೀವು ತರಿಸಿಕೊಳ್ಳಿ ಅದು ಭೂ ಹಗರಣದ್ದು ಇರಬಹುದು. ಮತ್ತೊಂದು ಇರಬಹುದು. ಯಾವ್ಯಾವುದಕ್ಕೆ ಅಲಾಟ್ ಮಾಡಿದ್ದೇವೆ? ಏನು ಮಾಡಿದ್ದೇವೆ? ಯಾವ ಪವರ್ ಪ್ರಾಜೆಕ್ಟ್ ಸ್ಯಾಂಕ್ಷನ್ ಮಾಡಿದ್ದೇವೆ? ಯಾವ ರೋಡನ್ನು ಸ್ಯಾಂಕ್ಷನ್ ಮಾಡಿದ್ದೇವೆ? ಅದನ್ನು ಟ್ರಾನ್ಸಪರೆಂಟ್ ಆಗಿ ಮಾಡಿದ್ದೇವೋ ಇಲ್ಲವೋ ಎನ್ನುವುದನ್ನು ತರಿಸಿಕೊಳ್ಳುವುದಕ್ಕೆ ನಿಮಗೆ ಹಕ್ಕಿದೆ. ತಾವು ಅದನ್ನು ಮಾಡಿ. ಎಕ್ಸಿಕ್ಯುಟೀವ್ ಪವರ್ ಬಗ್ಗೆ ನೀವು ಗೌಪ್ಯತೆ ಕಾಪಾಡಿಕೊಳ್ಳಬೇಕು ಎನ್ನುವ ಮಾತನ್ನು ಮಾನ್ಯ ಮಾಧುಸ್ವಾಮಿಯವರು ಒಂದು ರಚನಾತ್ಮಕವಾದಂತಹ ಸಲಹೆಯನ್ನು ಕೊಟ್ಟಿದ್ದಾರೆ. ಖಂಡಿತವಾಗಿಯೂ ಸಹ ಅದನ್ನು ನಾನು ಒಪ್ಪುತ್ತೇನೆ. ಯಾವುದೇ ಕಾರಣಕ್ಕೂ ಸಹ. ಸರ್ಕಾರದ ಜನಹಿತದ ಪರವಾಗಿ ಇರತಕ್ಕಂಥ ಗೌಪ್ಯತೆಗಳನ್ನು ಕಾಪಾಡತಕ್ಕಂಥ ವಿಚಾರದಲ್ಲಿ ನಾವು ಯಾವತ್ತು ಸಹಿತ ಹಿಂದೆ ಬೀಳುವುದಿಲ್ಲ. 30 ವರ್ಷ ಈ ಸದನದ ಸದಸ್ಯರಾಗಿದ್ದಂತಹ ಶ್ರೀಮಾನ್ ದೇವೇಗೌಡರು, ಲೋಕಸಭಾ ಸದಸ್ಯರಾಗಿ, ದೇಶದ ಪ್ರಧಾನಿಗಳಾಗಿ ಒಂದು ಸಂಸ್ಥೆಯನ್ನು ಎತ್ತಿ ಹಿಡಿಯತಕ್ಕಂಥ ನಾಯಕರಿಗೆ ಈ ಗೌಪ್ಯತೆ ಬಗ್ಗೆ ಪಾಠ ಹೇಳಿಕೊಡತಕ್ಕಂಥ ಅವಶ್ಯಕತೆ ಇಲ್ಲ ಎನ್ನುವಂತಹ ಮಾತನ್ನು ಹೇಳಿ ಇನ್ನು ರಿಮೋಟ್ ಕಂಟ್ರೋಲ್. ನೀವೇಲ್ಲಾ ರಿಮೋಟ್ ಕಂಟ್ರೋಲ್ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾನು ನಿಮ್ಮ ಜೊತೆಯಲ್ಲಿ ಸ್ವಲ್ಪ ದಿನ ಇದ್ದವನಲ್ಲ, ಆದ್ದರಿಂದ ನನಗೂ ಅನುಭವ ಇದೆ. 30 ವರ್ಷದ ಹಿಂದೆ ನಾವೆಲ್ಲ ಹೇಗೆ ಕೆಲಸ ಮಾಡುತ್ತಿದ್ದೆವು? ಏನೇನು ಎಲ್ಲೆಲ್ಲಿ ಎನ್ನುವುದು ನನಗೆ ಗೊತ್ತಿದೆ. ಆದುದರಿಂದ ಆಲ್ ಇಂಡಿಯಾ ಪೊಲಿಟಿಕಲ್ ಪಾರ್ಟೀಸ್ ಎಷ್ಟರ ಮಟ್ಟಿಗೆ ಇಂಡಿವಿಜುಯಲ್ ಆಗಿ ಕೆಲಸ ಮಾಡಬಹುದು ಎನ್ನುವುದು ತಮಗೆ ಗೊತ್ತಿರತಕ್ಕಂಥ ವಿಚಾರ. ಮಾನ್ಯ ಧರ್ಮಸಿಂಗ್ ರವರು ರಿಮೋಟ್ ಕಂಟ್ರೋಲ್ ಅಲ್ಲ ಎನ್ನುವ ಮಾತನ್ನು ಹೇಳಿ. ನಿನ್ನೆ ನಡೆದಂತಹ ಸಭೆ ಏನಿದೆ ಇದು ಒಂದು ಸೌಜನ್ಯದ ಭೇಟಿ. ಇನ್ನು ಎರಡನೆಯದಾಗಿ ಇದು ಯಾವುದೇ ಸಂವಿಧಾನಬಾಹಿರವಾಗಿರತಕ್ಕಂಥ ಕೆಲಸವಾಗಿಲ್ಲ. ಅಥವಾ ಸರ್ಕಾರದ ಗೌಪತ್ಯೆಯನ್ನು ಹೊರಗಡೆ ಹಾಕತಕ್ಕಂಥ ಪ್ರಶ್ನೆ ಕೂಡ ಬರುವುದಿಲ್ಲ. ಇಷ್ಟು ಹೇಳಿ ಕೈಗಾರಿಕಾ ಮಂತ್ರಿಯಾಗಿ ನನಗೆ ಎಕ್ಸಪ್ಲನೇಷನ್ ಕೊಡುವುದಕ್ಕೆ ಕರೆಸಿದರು ಮಾನ್ಯ

ಮುಖ್ಯಮಂತ್ರಿಗಳು ಎಂದು ಹೇಳುವುದರಲ್ಲೂ ಅರ್ಥವಿಲ್ಲ. ಅನೇಕ ಸಂದರ್ಭದಲ್ಲಿ
ಮೊನೆ ಮಾನ ಮುಖ್ಯಮಂತ್ರಿಗಳ ಪರವಾಗಿ ಎರಡ್ಮೂರು ಪ್ರಶ್ನೆಗೆ ಅವರ ಎದುರುಗಡೆ
ಅಧಿಕಾರವನ್ನು ಇನ್‌ಫರ್ಮೇಷನ್ ಅಂಡ್ ಟೆಕ್ನಾಲಾಜಿ ಬಗ್ಗೆ
ಫಂಗ್ ಆಗತಕ್ಕಂಥ ಸಂದರ್ಭದಲ್ಲಿ ಅಧಿಕಾರಿಗಳು
ನಿಜ. ಇದರಿಂದ ರಾಜ್ಯದ ಹಿತಕ್ಕೆ ಯಾವುದೇ ರೀತಿಯ ಧಕ್ಕೆ
ನ್ನು ನಾನು ಸ್ಪಷ್ಟ ಮಾಡುತ್ತಾ. ಶ್ರೀಮಾನ್ ದೇವೇಗೌಡರಿಗೆ
. ಅವರ ಜೀವನ ಕಳೆದು 35–40 ವರ್ಷಗಳಲ್ಲಿ. ನಾನು ಈ
ಾನ್ಯ ಶೆಟ್ಟರ್ ಸಾಹೇಬರು ಪಕ್ಕದಲ್ಲಿ ಕುಳಿತುಕೊಂಡಿದ್ದಾಗಲೂ
ಾತನಾಡಿರುವುದು ಮಿಲ್ಕ್ ಸೊಸೈಟಿಗೆ ಸಂಬಂಧಪಟ್ಟಂತೆ 2
ರೆಗೂ ಚರ್ಚೆಯಾಗಿದ್ದನ್ನು ನಾನು ಮತ್ತು ಮಾನ್ಯ ವಾಟಾಳ್
ಳಿ. ಏನಪ್ಪ ಇದು ತಲೆ ಮೇಲೆ ಕೈ ಇಟ್ಟುಕೊಂಡಿರುವಂತಹ
ೊತ್ತಿದೆ. ಚರ್ಚೆ ಮಾಡಿರುವವರು ಯಾರು ಎನ್ನುವ ಹೆಸರನ್ನು
ಯಾರಿಲ್ಲ, ಅದು ಅವಶ್ಯಕತೆ ಕೂಡ ಇಲ್ಲ, ಮಾನ್ಯ ದೇವೇಗೌಡರ
ಳು ಆಗುತ್ತಿರುತ್ತವೆ. ಮಾನ್ಯ ದೇವೇಗೌಡರು ಹೋರಾಟಗಾರರು
ನೆನಪಿನಲ್ಲೆ ಇಟ್ಟುಕೊಳ್ಳಬೇಕಾಗುತ್ತದೆ. ಮತ್ತೆ ಪತ್ರಿಕೆಗಳಲ್ಲಿ
ುವುದರಿಂದ ನಾನು ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ವು ಕೇಳಬೇಕಾಗುತ್ತದೆ. ಪತ್ರಿಕೆಗಳಲ್ಲಿ ನೈಸ್ ಕಂಪನಿ ವಿಚಾರದಲ್ಲಿ
ೃವಹಾರ ನಡೆದುಬಿಟ್ಟಿದೆ. ಅದಕ್ಕೋಸ್ಕರವಾಗಿ ನೀವೆ ಹೀಗೆ
ಂದು ಡೈರಕ್ಷನ್ ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ
ರು ಬಂದಿದ್ದಾರೆ ಎನ್ನುವುದನ್ನು ಬಿಂಬಿಸುವ ರೀತಿಯಲ್ಲಿ
. ಅದು ಸತ್ಯ ಅಲ್ಲವೆನ್ನುವುದನ್ನು ಹೇಳಿ. ನೈಸ್ ಕಂಪನಿ
ಗಳು ನಾವು ಹೈಕೋರ್ಟಿನ ಆರ್ಡರ್ ಪ್ರಕಾರವಾಗಿ ನಮ್ಮ
ಸರ್ಕಾರದ ಸ್ಟಾಂಡ್ ಏನು ಎನ್ನುವುದನ್ನು ತಿಳಿಸಬೇಕಾಗುತ್ತದೆ.
g up on 7th April. 31 ನಾವು ಅದರಲ್ಲೇ ಸ್ಪಷ್ಟ ಮಾಡುತ್ತೇವೆ.
ಗೌಡರು. when he was nothing.

ಲೋಕಸಭಾ ಸದಸ್ಯರಾಗಿದ್ದಂತಹ ಸಂದರ್ಭದಲ್ಲಿ. ಏನೂ
ಸಂದರ್ಭದಲ್ಲಿ ಸಹಿತ ಈ ವಿಚಾರದಲ್ಲಿ ಪಬ್ಲಿಕ್ ಇಂಟ್‌ರಸ್ಟ್
ರತಕ್ಕಂಥಾದ್ದೂ ನಮಗೆ ಗೊತ್ತಿದೆ. ಯಾವುದೆ ಕಾರಣಕ್ಕೂ
ಸುತ್ತಮುತ್ತ ಇರುವ ಜಮೀನನ್ನು ಬೇರೆಯವರ ವಶಕ್ಕೆ

ಅನ್ಯಾಯವಾಗಿ. ಅಕ್ರಮವಾಗಿ ಹೋಗುವುದಕ್ಕೆ ಬಿಡುವುದಿಲ್ಲ. ಅವರು ಅದರ ಬಗ್ಗೆ ಹೋರಾಟ ಮಾಡುತ್ತಿದ್ದಾರೆ ಎನ್ನುವುದು ತಮಗೆ ಗೊತ್ತಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಸ್ಪಷ್ಟ ಮಾಡುತ್ತಾ. ಈ ಘಟನೆ ಇವತ್ತು ಮಾನ್ಯ ಉಪಾಧ್ಯಕ್ಷರು. ತಾವು ಉಪಾಧ್ಯಕ್ಷರು ಆದಂತಹ ಸಂಗತಿ ಜೀವನದಲ್ಲೆ ಒಳ್ಳೆಯ ಸಂದರ್ಭ ಇದು. ಹಿಂದುಳಿದ ವರ್ಗದ ಸಮಾಜದವರು. ದೊಡ್ಡ ಕುಟುಂಬದವರು. ತಾವು ಮೂರ್‍ನಾಲ್ಕು ಬಾರಿ ವಿಧಾನಸಭೆಗೆ ಗೆದ್ದು ಬಂದಿದ್ದೀರಿ. ತಾವು ಹೊಸದಾಗಿ ಉಪಾಧ್ಯಕ್ಷರಾಗಿದ್ದರೂ ಕೂಡ ಸದಸ್ಯರಾಗಿ ಈ ಸದನದಲ್ಲಿ ಆ ಕಡೆ ಹಾಗೂ ಈ ಕಡೆ ಕುಳಿತುಕೊಂಡು ತಮಗೆ ಅನುಭವ ಇದೆ. ಇದು ಶೂನ್ಯವೇಳೆ ಅಲ್ಲದೆ ಹೋದರೂ ಸಹ. ತಾವು ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ಗೌರವ ಕೊಟ್ಟು ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅದರ ಜೊತೆಗೆ ಸರ್ಕಾರಕ್ಕೆ ಉತ್ತರ ಕೊಡುವುದಕ್ಕೂ ಅವಕಾಶ ಕೊಟ್ಟಿದ್ದೀರಿ. ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಉತ್ತರ ಕೊಟ್ಟಿದ್ದಾರೆ. ಈಗ ನಾವೇನು ಪ್ರಸ್ತಾಪ ಮಾಡಬೇಕು ಮಾಡಿದ್ದೇವೆ. ನಿಮಗೆ ಗೊತ್ತಿರುವ ಹಾಗೆ ಬಜೆಟ್ ಬಗ್ಗೆ ಚರ್ಚೆ ಪ್ರಾರಂಭವಾಗಬೇಕು. ಹಾಗಾಗಿ ನಾವೆಲ್ಲಾ ಪ್ರತಿಪಕ್ಷದವರು ಕುಳಿತು. ಸಮಾಲೋಚನೆ ಮಾಡಿ. ಇದನ್ನು ಬೇರೆ ರೂಪದಲ್ಲಿ ಚರ್ಚೆ ಮಾಡಬೇಕೆಂದು ಮಾಡಿದೆವು. ಆದರೆ ವೇಳೆಗೆ ಬರೋಣವೆಂದರೆ ಕಾರ್ಯಕಲಾಪಗಳು ನಡೆಯಬೇಕು ಬಜೆಟ್ ಬಗ್ಗೆ ಚರ್ಚೆಯಾಗಬೇಕು. ಸಂದಿಗ್ದ ಪರಿಸ್ಥಿತಿ ನಮಗೆ, ಜವಾಬ್ದಾರಿ ಇದೆ ರಾಜ್ಯದ ಜನತೆಯದು ಆದುದರಿಂದ ನಿನ್ನೆ ನಡೆದಿರುವಂಥಹ ಘಟನೆ ಈ ರಾಜ್ಯದ ಜನತೆ ತಲೆತಗ್ಗಿಸುವಂತಾದ್ದು. ಯಾವುದೇ ಒಂದು ಸ್ವಾಭಿಮಾನ ಇರುವಂತಹ ಒಂದು ಸರ್ಕಾರ ಈ ರೀತಿ ಜೀತದಾಳುಗಳಂತೆ ರಾತ್ರಿ 12 ಅಥವಾ 1.00 ಘಂಟೆಗೆ ಹೋಗಿ ನಿಂತುಕೊಳ್ಳುವುದು ಸಂಪ್ರದಾಯವಲ್ಲ. ತಾವು ಹೇಳಿದಿರಿ ಜೈಲಿಗೆ ಕಳುಹಿಸುತ್ತೇನೆ ಎಂದು. ಜೈಲಿಗೆ ಕಳುಹಿಸುವವರು. ಜೈಲಿಗೆ ಹೋಗುವವರು ಒಟ್ಟಿಗೆ ವ್ಯವಹಾರ ಮಾಡುತ್ತಿದ್ದೀರಾ ಎಂದು ಜನ ಕೂಡ ಮಾತನಾಡುತ್ತಿಲ್ಲ. ನೀವೆ ಹೇಳಿದಂತಹ ಮಾತು. ಈ ವ್ಯವಹಾರಗಳು ಕಳೆದ 9 ತಿಂಗಳಿನಿಂದ ತುದಿಗೆ ಬಂದಿದೆ. ಬಹಳ ದಿನ ನೀವು ಅಧಿಕಾರದಲ್ಲಿ ಮುಂದುವರೆಯುವಂತಹ ನೈತಿಕ ಹಕ್ಕು ಇಲ್ಲ. ಮುಂದುವರೆಯುತ್ತೀರಿ ಎಂದು ಜನ ಕೂಡ ವಿಶ್ವಾಸವನ್ನು ಇಟ್ಟುಕೊಂಡಿಲ್ಲ. ಈ ಘಟನೆ ನಿಶ್ಚಿತವಾಗಿ ನಿಮ್ಮ ವ್ಯವಹಾರವನ್ನು ಕುದುರಿಸುವಂತಾದ್ದು. ಸರ್ಕಾರದ ಖಜಾನೆಯನ್ನು ಲೂಟಿ ಮಾಡುವಂತಹ ಒಂದು ಹಗರಣ ಇದು. ಹಾಗೂ ಕೊಡುವ ಹಾಗೂ ತೆಗೆದುಕೊಳ್ಳುವ ವ್ಯವಹಾರದಲ್ಲಿ ಭಿನ್ನಾಭಿಪ್ರಾಯ

ಬಂದು ನೀವು ಈ ಪರಿಸ್ಥಿತಿಗೆ ಬಂದಿದ್ದೀರಿ. ಇಂತಹ ಒಂದು ನಡವಳಿಕೆಯನ್ನು ಸಾಬೀತು ಮಾಡುವಂತಹ ಕೆಲಸ ಸಿಂಧ್ಯರವರಿಗೆ ಒದಗಿ ಬಂತಲ್ಲ ಎಂದೇಳಿ ಅನಿವಾರ್ಯವಾಗಿ. ರಾಜ್ಯದ ಜನತೆ ನಿಮ್ಮಲ್ಲೆ ವಿಶ್ವಾಸ ಇಡುವುದಕ್ಕೆ ಸಾಧ್ಯವಿಲ್ಲ. ಟ್ರೆಜರಿ ಸೇಫ್ ಇಲ್ಲ. ಇವತ್ತು ನೆಲಗಳ್ಳರಿಗೆ ಸುಗ್ಗಿ ಕಾಲ ಇದಾಗಿದೆ. ಆ ವ್ಯವಹಾರವನ್ನು ಮುಂದುವರೆಸಿದ್ದೀರಿ. ಇದನ್ನು ನಾವು ಪ್ರತಿಭಟನೆ ಮಾಡಿ ವಾಕೌಟ್ ಮಾಡಿ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಬಿಜೆಪಿ ಸದಸ್ಯರುಗಳೆಲ್ಲರೂ ಸದನದಿಂದ ಹೊರನಡೆದರು)

ಶ್ರೀ ಪಿ.ಜಿ.ಆರ್. ಸಿಂಧ್ಯ :– ಬರೀ ಮಾತನಾಡುತ್ತಾರೆ. it is a shame.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ. ಎರಡು ಮಾತುಗಳನ್ನು ಆಡುತ್ತೇನೆ. ಯಾವುದೇ ಹಂತದಲ್ಲಿ ನಾನು ಮಾನ್ಯ ದೇವೇಗೌಡರಿಗೆ ಪಾಠ ಹೇಳಿಕೊಡುವಷ್ಟು ದೊಡ್ಡವನಾಗಿದ್ದೇನೆ ಎಂದು ನಾನು ಇಲ್ಲಿ ಹೇಳಿಲ್ಲ. ಆದರೆ ಸನ್ಮಾನ್ಯ ಸಿಂಧ್ಯರವರು ಆ ಮಾತನ್ನು ಏಕೆ ಹೇಳಿದರು ಗೊತ್ತಿಲ್ಲ. ನಾನು ಮಾನ್ಯ ಸಿಂಧ್ಯರವರಿಂದ ಪಾಠ ಕಲಿಯಬೇಕಾಗಿದೆ. ಯಾವ್ಯಾವಾಗ ಯಾವ್ಯಾವ ರೀತಿ ಎಲ್ಲೆಲ್ಲಿ ಹೇಗೆ ಮಾತನಾಡಬೇಕು ಎಂದು ನಾನು ನಿಮ್ಮ ಸ್ಟೂಡೆಂಟ್ ಆಗಬೇಕು. ನಾನು ಹೇಗೆ ಹೋಗಿ ಅವರಿಗೆ ಪಾಠ ಹೇಳಕೊಡಲಿ. ನಮ್ಮದು ಒಂದೆ ಕನ್‌ಸರ್ನ್ ನೈಸ್ ಕಂಪನಿ ವ್ಯವಹಾರದಲ್ಲಿ ಬೆಂಗಳೂರಿನಲ್ಲಿ ಭೂಮಿಯನ್ನು ಅಕ್ರಮವಾಗಿ ನೀವೇನು ಸ್ವಾಧೀನಪಡಿಸಿಕೊಳ್ಳುವ ವ್ಯವಹಾರದಲ್ಲಿ ಮಾನ್ಯ ದೇವೇಗೌಡರಿಗೂ ನಮಗೂ ತಾತ್ವಿಕವಾಗಿ ಯಾವ ವ್ಯತ್ಯಾಸವು ಇಲ್ಲ. ನಾನು ಅದನ್ನು ಇಲ್ಲಿ ನಿರ್ಭೀತಿಯಿಂದಲೆ ಹೇಳುತ್ತಿದ್ದೇನೆ. ಅದರಲ್ಲಿ ಏನಿಲ್ಲ. ನಾನೇ ಇಲ್ಲಿ ರೈಸ್ ಮಾಡಿದ್ದೇನೆ. ನಾನೇ ಪಬ್ಲಿಕ್ ಇಂಟರೆಸ್ಟ್ ಲೆಟಿಗೇಷನ್ ಹಾಕಿಕೊಂಡು ಹೈಕೋರ್ಟಿನ ಮುಂದಿದ್ದೇನೆ. ನಾನೇ ನಿಮ್ಮ ಮೇಲೂ ಸೇರಿಸಿ ಕೇಸ್ ಹಾಕಿದ್ದೇನೆ. ನಾನು. ನೈಸ್ ವ್ಯವಹಾರದಲ್ಲಿ ಮಾನ್ಯ ದೇವೇಗೌಡರ ಇಂಟಿಗ್ರಿಟಿಯನ್ನು ಕ್ವೆಶ್ಚನ್ ಮಾಡುವುದಕ್ಕೆ ಎಂದು ನಾನು ನಿಂತು ಯಾವತ್ತು ಮಾತನಾಡಿಲ್ಲ. ಸತ್ಯವಾಗಿ ಅವರಷ್ಟೇ ಪ್ರಾಮಾಣಿಕವಾಗಿ ನಿಂತು ನಾನು ಹೇಳುತ್ತಿದ್ದೇನೆ. ಸಂವಿಧಾನಾತ್ಮಕವಾದ ಬಿಕ್ಕಟ್ಟನ್ನು ನಿರ್ಮಾಣ ಮಾಡಿರುವುದು ನಿಜ ನಿನ್ನೆ ದಿವಸ. ನಿನ್ನೆ ಸಾಯಾಂಕಾಲ ಅಧಿಕಾರಿಗಳನ್ನು ಕರೆದು ಸಮನ್ ಮಾಡಿ ಫೈಲ್ಸ್ ತರಿಸಿ. ಒಬ್ಬರು ಎಂಪಿ ಸಿಎಂ ಹತ್ತಿರ ಹೋಗಬಾರದು. ಮಾಹಿತಿ ಕೇಳಬಾರದು ಎಂದಲ್ಲ. ಬಂದು ಕೇಳಲಿ. ಸರ್ಕಾರಕ್ಕೆ ಅರ್ಜಿ ಕೊಟ್ಟು ಮಾಹಿತಿ

ತೆಗೆದುಕೊಳ್ಳಲಿ. ಬೇಡವೆನ್ನಲಿಲ್ಲ. ಆದರೆ ಇಡೀ ಆಡಳಿತಶಾಹಿಯನ್ನು ಸಮನ್ ಮಾಡುವುದು ಸಂವಿಧಾನಕ್ಕೆ ವಿರುದ್ಧವಾದ ಕೃತ್ಯ ಎನ್ನುವುದು ನಮ್ಮ ಭಾವನೆ. ಇದರಲ್ಲಿ ಪಾಠ ಹೇಳಿಕೊಡುತ್ತಾರೆ, ಇಷ್ಟು ಅನುಭವವಾಗಿದೆ. ಅಷ್ಟು ಅನುಭವವಾಗಿದೆ ಎನ್ನುವುದಲ್ಲ. ಅನುಭವ ಆಗುತ್ತಾ ಆಗುತ್ತಾ ಮರೆವು ಬರುತ್ತದೆ. ನಿನ್ನೆ ನಡೆದಿರುವಂತಹ ಘಟನೆ ಇಡೀ ಸರ್ಕಾರದ ಅದಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆಯವರನ್ನು ಅಲ್ಲಿಗೆ ಸಮನ್ ಮಾಡಲಾಗಿತ್ತು. ಅಲ್ಲಿ ಎಲ್ಲರೂ ಕುಳಿತುಕೊಂಡು ಹೀಗೆ ಆಗಬೇಕು. ಹಾಗೆ ಆಗಬೇಕು ಎಂದು ನಿರ್ಧಾರ ತೆಗೆದುಕೊಳ್ಳಬೇಕಾಗಿದಂತಹ ಎಲ್ಲಾ ಮಾಧ್ಯಮಗಳು ಒಂದೆ ಸಮನೆ ಇಡೀ ರಾಜ್ಯದಲ್ಲಿ ಬಿಂಬಿಸಿದೆ. ಇದು ಯಾರಿಗೂ ಗೌರವ ತರುವುದಿಲ್ಲ. ಅವರು ಎಷ್ಟೆ ದೊಡ್ಡವರು ಇರಲಿ. ಸಂವಿಧಾನವನ್ನು ಸೃಷ್ಟಿ ಮಾಡಿದಂತಹ ಅಂಬೇಡ್ಕರ್‌ರವರೆ ಬರಲಿ. ಒಂದು ರಾಜ್ಯದ ಆಡಳಿತವನ್ನು ತೆಗೆದುಕೊಂಡು ಇವತ್ತು ಮ್ಯಾಂಡೇಟ್ ಇಲ್ಲದವರು ಸರ್ಕಾರವನ್ನು ನಡೆಸುವುದಕ್ಕೆ ಆ ಪ್ರಮಾಣದ ಹಕ್ಕನ್ನು ಇಲ್ಲದವರು ಸರ್ಕಾರದ ಎಂಟೈರ್ ಅಧಿಕಾರ ಶಾಹಿಯನ್ನು ಕರೆಸಿ ಕುಳಿತುಕೊಂಡು ಆದೇಶ ಕೊಡುವುದಾದರೆ. ಅದನ್ನು ಪರಿಶೀಲನೆ ಮಾಡುವುದಾಗಲಿ ಅದನ್ನು ಹೀಗೆ ಮಾಡಿ ಹಾಗೆ ಮಾಡಿ ಎಂದು ಹೇಳುವುದಾಗಲಿ ನಿಜವಾಗಿ ಇದು ಯಾರಿಗೂ ಗೌರವ ತರುವಂತಾದ್ದಲ್ಲ. ಅವರ ಬಗ್ಗೆ ನಮಗೂ ಗೌರವ ಇದೆ. ನಾವೆಲ್ಲಾ ಕೂಡ ಆ ಶಾಲೆಯಲ್ಲಿ ಬೆಳೆದವರೆ. ಆದರೆ ಯಾವುದಕ್ಕೆ ಆಗಲಿ ಒಂದು ಹಂತ ಇರುತ್ತದೆ. ಮಾಡಲಿ ಆದರೂ ಖಾಸಗಿಯಾಗಿ ಕುಳಿತುಕೊಂಡು ಸಿಂಧ್ಯರವರಿಗೆ ಹೇಳಲಿ. ಖಾಸಗಿಯಾಗಿ ಕುಳಿತುಕೊಂಡು ಮಾನ್ಯ ಧರಂಸಿಂಗ್‌ರವರಿಗೆ ಹೇಳಲಿ. ಖಾಸಗಿಯಾಗಿ ಕುಳಿತುಕೊಂಡು ಇಲ್ಲಿರುವ ಕ್ಯಾಬಿನೆಟ್ ಸಚಿವರಿಗೆ ಹೇಳಲಿ. ನಾವ್ಯಾರು ತಕರಾರು ಮಾಡುವುದಿಲ್ಲ. ಆದರೆ ಈ ಪರಿಪಾಠ ಮುಂದುವರೆದಿರುವುದು ನಿಜವಾಗಲೂ ದುರ್ದೈವ. ಮಾನ್ಯ ಸಿಂಧ್ಯರವರು ಡಿಫೆಂಡ್ ಮಾಡಬೇಕಾಗಿದೆ, ಪಾಪ. ಅವರು ಸರ್ಕಾರದಲ್ಲಿದ್ದಾರೆ. ಅವರು ಡಿಫೆಂಡ್ ಮಾಡಲೇಬೇಕು. ಅವರ ಒತ್ತಡಗಳು ನಮಗೆ ಅರ್ಥವಾಗುತ್ತದೆ. ಅರ್ಥವಾಗದೆ ಇರುವಷ್ಟು ಸಣ್ಣವರಲ್ಲ, ನಿಮ್ಮಷ್ಟು ದೊಡ್ಡವರಲ್ಲದೆ ಇದ್ದರೂ ನಾವು, ಆಗುತ್ತದೆ, ಆದರೆ ನೀವು ಮಾಡುವುದನ್ನು ಮಾಡಲೇಬೇಕಾಗುತ್ತದೆ. ನಾವ್ಯಾರು ಪಾಠ ಹೇಳಿಕೊಡುವುದಕ್ಕೆ ಎಂದು ಇಲ್ಲಿ ರೈಜ್ ಮಾಡುತ್ತಿಲ್ಲ. ನಾವು ನಮ್ಮ ಕೆಲಸ ಮಾಡುವುದಕ್ಕೆ ಇಲ್ಲಿ ನಿಂತಿದ್ದೇವೆ, ನಾನು ಹಾನೆಸ್ಟ್ ಆಗಿ ಹೇಳುತ್ತೇನೆ. ನಾನು ಪಾಠ ಕಲಿಯಲೇಬೇಕು ಎಂದರೆ ನಿಮ್ಮ ಸ್ಕೂಲಿಗೆ ನಾನು ಬರಬೇಕು, ಯಾವ್ಯಾವಾಗ, ಯಾವ್ಯಾವ ಪಾಠದ ಬಗ್ಗೆ ಮಾತನಾಡಬೇಕು ಎನ್ನುವುದನ್ನು ನಿಮಗಿಂತ ಹೆಚ್ಚಾಗಿ ನನಗೆ ಯಾರೂ ಹೇಳಿಕೊಡುವವರು ಇಲ್ಲವೆಂದು ನನ್ನ ಭಾವನೆ. ನೀವೆ ಮುಂದಿನ ದಿವಸಗಳಲ್ಲಿ

ನಮಗೆ ಗುರುಗಳಾಗಬೇಕಾಗಿರುವವರು. ನಾನ್ಯಾಕೆ ಅವರಿಗೆ ಪಾಠ ಹೇಳಿಕೊಡುವುದಕ್ಕೆ ಹೋಗೋಣ. ಹೌದು. ಲೀಡರ್‌ಶಿಪ್ ಅಲ್ಲ ಪಾತ್ರ ಒಪ್ಪಿದ್ದೇನೆ. ಆ ಪಾಠದ ಪಾತ್ರಗಳು ಏನಿದೆ ಹಾನೆಸ್ಟ್ ಆಗಿ ಒಪ್ಪಿಕೊಂಡಿದ್ದೇನೆ ಇದನ್ನು ವಿರೋಧಿಸಿ ನಾನೂ ಕೂಡ ವಾಕೌಟ್ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಸದನದಿಂದ ಹೊರಗೆ ಹೋದರು)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೆ. ಮಾನ್ಯ ಸಿಂಧ್ಯರವರೆ. ತಾವು ಸರ್ಕಾರವನ್ನು ಡಿಫೆಂಡ್ ಮಾಡುವುದನ್ನು ಒಪ್ಪುತ್ತೇನೆ. ಸಂವಿಧಾನಕ್ಕೆ ಇದು ಬಹಳ ಸಂಪೂರ್ಣವಾದಂತಹ ಅಪಚಾರ ಇದು ಒಂದು ಸಾರಿ ನಡೆದಿಲ್ಲ. ಹಿಂದೆನೂ ಎರಡೂ ಮೂರು ಬಾರಿ ನಡೆದಿದೆ.

ಇದು ಹಿಂದೆಯೂ ಸಹ ಎರಡು ಮೂರು ಬಾರಿ ನಡೆದಿದೆ. ಸರ್ಕಾರ ಒಂದು ಕಡೆ ಪ್ರಮಾಣ ವಚನವನ್ನು ಮಾಡಿ ಗೌಪ್ಯತೆ ಇದ್ದು ಎಲ್ಲವೂ ಇದ್ದು ನೀವು ಮಾಡತಕ್ಕಂಥ ವಿಚಾರವಾಗಿ ನಿಮಗೆ ನಾನು ಮೊದಲೇ ನನ್ನ ಭಾಷಣದಲ್ಲಿ ಹೇಳಿದೆ. ನಿಮಗೆ ಇದು ಒಪ್ಪಿಗೆಯಾಗುತ್ತದಾ? ನೀವು 22 ವರ್ಷಗಳು ಇಲ್ಲಿ ಇದ್ದೀರಿ. ನೀವು ಈ ಸದನಕ್ಕೆ. ನಾಳೆ ನೀವು ಸಚಿವ ಸಂಪುಟವನ್ನು ಕರೆದುಬಿಡಿ. ಎಲ್ಲರನ್ನು ಕರೆದು ಮಾತನಾಡಬಹುದಲ್ಲಾ. ತಪ್ಪು ಏನು ಇದೆ? ನೇರವಾಗಿ ಬರಬಹುದು ಅವರು ಹಿರಿಯರು. ಇದಕ್ಕೆ ಬೇಕಾದಷ್ಟು ವಿಚಾರಗಳನ್ನು ಹೇಳಬಹುದು. ಇದು ಒಳ್ಳೆಯ ಸಂಪ್ರದಾಯವಲ್ಲಾ ಪತ್ರಿಕೆಗಳಲ್ಲಿ ಬಂದಿರುವಂಥಾದ್ದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ ಅವರು ನಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು, ಅವರನ್ನು ಜೆ.ಡಿಎಸ್.ನ ಎಲ್ಲಾ ಮಂತ್ರಿಗಳು ಅವರ ಮನೆಗೆ ಹೋಗುತ್ತೇವೆ. ಚರ್ಚೆ ಮಾಡುತ್ತೇವೆ. ಅದರಲ್ಲಿ ತಪ್ಪು ಏನು? ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:ನಾನು ಅವರ ಮನೆಗೆ ಹೋಗಿದ್ದು ತಪ್ಪು ಎಂದು ಹೇಳುತ್ತಾ ಇಲ್ಲ. ನಿನ್ನೆ ನಡೆದಂತಹ ಘಟನೆ ಯಾರಿಗೂ ಗೌರವ ತರುವಂಥಾದ್ದು ಅಲ್ಲ. ಎಲ್ಲರು ಎನ್ನುವುದಕ್ಕಿಂತ ಹೆಚ್ಚಾಗಿ ಸಂವಿಧಾನ ಬಾಹಿರವಾಗುವಂತಹ ಘಟನೆಯನ್ನು ತಾವು ಮಾಡಿದ್ದೀರಿ. ಅದು ನಿಮಗೆ ಎಚ್ಚರವಿರಲಿ. ಎಂದು ಇದನ್ನು ವಿರೋಧಿಸಿ ನಾನು ಸಭಾ ತ್ಯಾಗ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ತಾವು ಯಾವುದನ್ನು ವಿರೋಧ ಮಾಡುತ್ತೀರಾ?

ಶ್ರೀ ವಾಟಾಳ್ ನಾಗರಾಜ್: ನಿನ್ನೆ ನಡೆದಂತಹ ಸಭೆಯ ಬಗ್ಗೆ ಎಂದು

ಹೇಳುತ್ತಿದ್ದೇನೆ. ನೀವು ಹೇಳಿದಂತಹ ಮಾತಿನಲ್ಲಿ ಸತ್ಯಾಂಶವಿಲ್ಲ. ಅದರ ಬಗ್ಗೆ ನಂಬಿಕೆ ಇಲ್ಲ. ಅದು ನಿಮಗೆ ಸ್ಪಷ್ಟಪಡಿಸುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾ ತ್ಯಾಗ ಮಾಡಿದರು)

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಮಾನ್ಯ ಉಪಾಧ್ಯಕ್ಷರೆ. ಈಗ ಮಾನ್ಯ ಪಿ.ಜಿ.ಆರ್.ಸಿಂಧ್ಯರವರು ಬಹಳ ಚೆನ್ನಾಗಿ ಉತ್ತರವನ್ನು ಕೊಟ್ಟಿದ್ದಾರೆ. ಅವರು ನಮ್ಮ ಕಡೆ ಕುಳಿತಿದ್ದಾರೆ. ಅದಕ್ಕೆ ತದ್ವಿರುದ್ಧವಾಗಿ ಅದೇ ಧಾಟಿಯಲ್ಲಿ. Sir he is a good parliamentarian.

ಶ್ರೀ ಪಿ.ಜಿ.ಆರ್.ಸಿಂಧ್ಯ: Don't cast personal aspersion on me. Please be seated.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾನು ಹೇಳಿದಂತಹ ಇನ್ನೊಂದು ಶಬ್ದವನ್ನು ನೀವು ಕೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : I am not yielding. ದಯವಿಟ್ಟು ನಾನು ಹೇಳುವುದನ್ನು ಕೇಳಿ. you are a good parliamentarian ಎಂದು ನಾನು ಮುಂದಿನ ವಾಕ್ಯವನ್ನು ಹೇಳಿದೆ. ಅದನ್ನು ನೀವು ಅಕ್ಸೆಪ್ಟ್ ಮಾಡುತ್ತೀರಾ?

ಶ್ರೀ ಪಿ.ಜಿ.ಆರ್.ಸಿಂಧ್ಯ : ತಾವು ಮಾತನಾಡಿ. ನಾನು ಆಮೇಲೆ ಮಾತನಾಡುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಅದು ಇಲ್ಲವೆಂದು ಆದರೆ ನಾನು ಏನು ಮಾಡಲಿ?

ಶ್ರೀ ಪಿ.ಜಿ.ಆರ್.ಸಿಂಧ್ಯ ; ನೀವು ಹಾಗಾದರೆ ಕುಳಿತುಕೊಳ್ಳಿ ನಾನು ಹೇಳುತ್ತೇನೆ. ನೀವು ಯೀಲ್ಡ್ ಆಗುವುದಿಲ್ಲವೆಂದು ಹೇಳಿದ್ದೀರಲ್ಲಾ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಈಗ ನಾನು ಹೇಳುವಂಥಾದ್ದು. ಎಲ್ಲವನ್ನು ನಂಬುವುದಕ್ಕೆ ಆಗುವುದಿಲ್ಲ. you have presented the case very well. ನೀವು ಚೆನ್ನಾಗಿ ಪ್ರೆಸೆಂಟ್ ಮಾಡಿದ್ದೀರಿ. ಅದನ್ನು ಸಂಪೂರ್ಣವಾಗಿ ಪತ್ರಿಕೆಯವರು ಬರೆದಿರುವಂತದ್ದು ಸುಳ್ಳು ಎಂದು ಹೇಳುವುದಕ್ಕೆ ಆಗುತ್ತದಾ? ಅದು ಸಂಪೂರ್ಣ ಸುಳ್ಳಲ್ಲ. ನೀವು ಸತ್ಯಕ್ಕೆ ದೂರವಾದದ್ದು ಎಂದು ಕೆಲಸವನ್ನು ಒಪ್ಪಿದ್ದೀರಿ. ಆದರೆ

ನೀವು ನನ್ನನ್ನು ವಾಕ್ ಔಟ್ ಮಾಡುತ್ತೇನೆಂದು ತಿಳಿದುಕೊಳ್ಳಬೇಡಿ. ನಾನು ವಾಕ್ ಔಟ್ ಮಾಡುವುದಿಲ್ಲ. ಇಲ್ಲಿ ನನಗೆ ಬೇಕಾಗಿರುವಂಥಾದ್ದು ವಾಸ್ತವಾಂಶ. ಇದರಿಂದ ನಾನು ವಾಕ್ ಔಟ್ ಮಾಡಿ ನನಗೆ ಏನು ಆಗಬೇಕಾದ್ದು ಇಲ್ಲ. ಎಲ್ಲೋ ಒಂದು ಕಡೆಯಲ್ಲಿ all is not well ಎನ್ನುವಂತಹ ಅಭಿಪ್ರಾಯ ಬಂದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ; ನೋಣ ಇದೆಯೆಂದು ಹೇಳಿದೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಹೌದು. ಇದ್ದೆ ಇದೆ. ಅದನ್ನು ಒಪ್ಪಿಕೊಂಡರೆ ಸಾಕು

ಶ್ರೀ ಜಿ.ವಿ.ಶ್ರೀರಾಮರೆಡ್ಡಿ. ಅದು ಎಲ್ಲಿದೆಯೆಂದು ಕೇಳಿ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು ಎಲ್ಲಿದೆ ಎಂದು ಹೇಳಿ ಎಂದು ಕೇಳುತ್ತಿದ್ದಾರೆ. ಅದಕ್ಕೋಸ್ಕರ ಇಂತಹ ಘಟನೆಗಳಿಗೆ ಅವಕಾಶವನ್ನು ಕೊಡಬೇಡಿ. ಇದು ಪತ್ರಿಕೆಗಳಲ್ಲಿ ಬಂದಿದೆ. ಇದನ್ನು ಬಂದಿರುವಂಥಾದ್ದು ಸುಳ್ಳು ಎಂದು ನಾನು ಒಪ್ಪವುದಕ್ಕೆ ತಯಾರು ಇಲ್ಲ. ದಯವಿಟ್ಟು ಇಂಥಾದ್ದಕ್ಕೆ ಅವಕಾಶವನ್ನು ಕೊಡಬೇಡಿ. ಎಂದು ನಾನು ಮಾನ್ಯ ಉಪಾಧ್ಯಕ್ಷರ ಮುಖಾಂತರ ತಮ್ಮನ್ನು ಕೇಳಲಿಚ್ಚಿಸುತ್ತೇನೆ. ಇಷ್ಟು ಬಿಟ್ಟು ಬೇರೆನೂ ಹೇಳಲಿಚ್ಚಿಸುವುದಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಉಪಾಧ್ಯಕ್ಷರೇ, ನಾನು ಒಂದು ವೈಯಕ್ತಿವಾದ ವಿವರಣೆಯನ್ನು ಕೊಡಬೇಕು. ಏಕೆಂದರೆ ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಮತ್ತು ಮಾನ್ಯ ಕೆ.ಜಯಪ್ರಕಾಶ್ ಹೆಗ್ಡೆಯವರು, ನನ್ನ ಬಗ್ಗೆ ವೈಯಕ್ತಿಕವಾಗಿ ಆಪಾದನೆಯನ್ನು ಮಾಡಿದ್ದಾರೆ. ಅದನ್ನು ನಾನು ಕ್ಲಾರಿಫೈ ಮಾಡುವುದಕ್ಕೆ ನಿಂತುಕೊಂಡಿದ್ದೇನೆ, ನಾನು ಮಾತನಾಡಿದ ಮೇಲೆ ಮಾನ್ಯ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡಲಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಸಿಂಧ್ಯರವರೇ. ನಾನು ಒಂದು ನಿಮಿಷ ಹೇಳಿಬಿಡುತ್ತೇನೆ. ತಾವು ಒಂದು ಸಾರಿ ಆಮೇಲೆ ಉತ್ತರವನ್ನು ಕೊಡಿ. ಈ ಘಟನೆ ಸದನದಲ್ಲಿ ನಡೆದಾಗ ನಾನು ಇರಲಿಲ್ಲ. ನಾನು ಕೊನೆ ಗಳಿಗೆಯಲ್ಲಿ ಸದನಕ್ಕೆ ಬಂದೆ. ಏನು ಆಗಿರಬಹುದೆಂದು ನಾನು ಊಹೆ ಮಾಡುತ್ತಿದ್ದೇನೆ. ನಿನ್ನೆ "ಬಾಲಬ್ರೂಯಿಯಲ್ಲಿ ನಡೆದಂತಹ ಘಟನೆ ಪತ್ರಿಕೆಗಳಲ್ಲಿ ಬಂದಿರುವಂಥಾದ್ದು ಎಂದು ನಾನು ಅಂದುಕೊಂಡಿದ್ದೇನೆ. ಇದು ಸದನದಲ್ಲಿ ಪ್ರಸ್ತಾಪವಾದಾಗ ನಾನು ಇರಲಿಲ್ಲ. ಆದರೆ ಪತ್ರಿಕೆಗಳಲ್ಲಿ ಬಂದಿರುವಂತಹ ಸತ್ಯವನ್ನು ಸುಳ್ಳು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಆದರೆ ಇವರು "ಬಾಲಬ್ರೂಯಿಯಲ್ಲಿ ಸೇರಿದ್ದು ತಪ್ಪು ಎಂದು

ಹೇಳುವುದಕ್ಕೆ ಹೋಗುವುದಿಲ್ಲ. ಅದು ನಿಮ್ಮ ವಿವೇಚನೆಯ ವ್ಯಾಪ್ತಿಗೆ ಬಿಟ್ಟಂಥ ವಿಚಾರ. ಆದರೆ ಒಂದು ಸತ್ಯವನ್ನು ನೀವು ಒಪ್ಪಿಕೊಳ್ಳಬೇಕು. ನಿನ್ನೆ ನೀವು ಸಭೆ ಸೇರಿ. ರಾಜ್ಯದ ಹಿತದೃಷ್ಟಿಯ ಬಗ್ಗೆ ಚರ್ಚೆ ಮಾಡಿದ್ದೀರಾ. ಇಲ್ಲವಾ? ಎಂಬ ಪ್ರಶ್ನೆಗಿಂತ. ಅದು ಸಕಾರತ್ಮಕವಾಗಿ ಜನತೆಯ ಮುಂದೆ ಪ್ರೆಸೆಂಟ್ ಆಗಿದೆ.

(ಈ ಹಂತದಲ್ಲಿ ಮಾನ್ಯ ಕೆ.ಎಂ.ಕೃಷ್ಣಮೂರ್ತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅದಕ್ಕೆ ಮಾಧ್ಯಮದವರ ತಪ್ಪು ಎಂದು ನಾನು ಹೇಳುವುದಕ್ಕೆ ತಯಾರಿಲ್ಲ. ಏಕೆಂದರೆ ಅದಕ್ಕೆ ನೀವೇ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಆ ರೀತಿ ನಕಾರಾತ್ಮಕವಾದ ಪರಿಣಾಮವಾಗುವುದಕ್ಕೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಆದರೆ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವಂಥಾದ್ದು. ನಿಮ್ಮದು ಸಮ್ಮಿಶ್ರ ಸರ್ಕಾರ, ಆ ರೀತಿ ಸಭೆ ಸೇರಿ ಚರ್ಚೆ ಮಾಡಬೇಕಾದಂತಹ ಅವಶ್ಯಕತೆ ಇದೆ. ನಾನು ಇಲ್ಲವೆಂದು ಬೇರೆಯವರು ಹೇಳಿದ ರೀತಿಯಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಅದು ತಪ್ಪಾಗುತ್ತದೆ. ಆದರೆ ನೀವು ಒಂದು ಕಾಮನ್ ಮಿನಿಮಮ್ ಪ್ರೋಗ್ರಾಂ ಎಂದು ಮಾಡಿಕೊಂಡಿದ್ದೀರಿ. ನಾನು ಹಿಂದೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಂತಹ ಸಂದರ್ಭದಲ್ಲಿ ಒಂದು ವಿಚಾರವನ್ನು ತಮಗೆ ಹೇಳಿದ್ದೆ. ತಾವು ಅದನ್ನು ಗಮನಿಸಲಿಲ್ಲ. ನೀವು " ಕಾಮನ್ ವಿನಿಮಮ್ ಪ್ರೋಗ್ರಾಂ ಅನ್ನು ಜಾರಿ ಮಾಡುವುದಕ್ಕೆ ಒಂದು ಜಾಯಿಂಟ್ ಕನ್ಸಲ್ಟೇಟೀವ್ ಕಮಿಟಿಯನ್ನು ನಿಮ್ಮ ಒಳಗೆ ಮಾಡಿಕೊಳ್ಳಿ ಇದನ್ನು ಮಾಡಿಕೊಂಡ ನಂತರ ಅದನ್ನು ಜಾರಿ ಮಾಡುವುದಕ್ಕೆ ನೀವು ಪ್ರಯತ್ನ ಮಾಡಿದಾಗ ನಿಮ್ಮ ನಿಮ್ಮಲ್ಲೆ ಇರಬಹುದಾದಂತಹ. ಏಕೆಂದರೆ it is a fact that two opposite poles joined together to run the government for certain purpose.

ಅದರಲ್ಲಿ ತಪ್ಪು ಏನು ಇಲ್ಲ. ನಿಮ್ಮಲ್ಲಿ ಇರುವಂತಹ ವೈರುದ್ಯ ಸಹಜ. ಅದು ಇರಬೇಕು. ಅದು ಇಲ್ಲದಿದ್ದರೆ ಸರ್ಕಾರವನ್ನು ನಡೆಸುವುದಕ್ಕೆ ಆಗುವುದಿಲ್ಲ. with all your contradictions. you have joined together to avoid certain people. contradictions. ಇಲ್ಲದೇ ಸರ್ಕಾರವನ್ನು ನಡೆಸಬೇಕೆಂದು ನಾವು ಯಾರಾದರೂ ಊಹೆ ಮಾಡಿದರೆ. ನಮ್ಮಷ್ಟು we are living in a fools paradise. ಎಂದು ಆಗುತ್ತದೆ. ಏನು without contradictions coalition government has to run ಎಂದು ಯಾರಾದರೂ ಹೇಳಿಕೊಂಡರೆ ಅಥವಾ ತಿಳಿದುಕೊಂಡರೆ ತಪ್ಪಾಗುತ್ತದೆ. ಆ ರೀತಿ ತಿಳಿದುಕೊಳ್ಳುವವರಿಗೆ ಇನ್ನೊಂದು

ರಾಜಕೀಯ ದೃಷ್ಟಿ ಇರಬೇಕಷ್ಟೆ. with all your internal contradictions you must find out a mechanism to solve the problems, issues.

ಅದು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಏನಾಗಿದೆ ಯಾರಾದರೂ ಇಂಟರ್‌ಫಿಟ್ ಮಾಡುವುದಕ್ಕೆ ಅವಕಾಶವಿದೆ. it is an extra constitutional authourity exercising power on the Government ಎಂದು ಹೇಳಕ್ಕಂಥ ಫೀಲ್ಲಿಂಗ್ ಯಾರಿಗಾದರೂ ಬರುವಂತಹ ಸಾಧ್ಯತೆಗಳು ಇವೆ. ಅದಕ್ಕೆ ನೀವು ಎಡೆ ಮಾಡಿಕೊಟ್ಟಿದ್ದೀರಿ. ಅದರ ಬದಲು ನಾನು ಈಗಲೂ ನಿಮ್ಮ ಇಬ್ಬರಲ್ಲೂ ರಿಕ್ವೆಸ್ಟ್ ಮಾಡಿಕೊಳುತ್ತಿದ್ದೇನೆ. since it is a coalition government with all your differences you are running the government. We are very happy. at least ನೀವು ಈಗಲಾದರೂ ಪ್ರಯತ್ನವನ್ನು ಮಾಡಿ. ಏಕೆಂದರೆ ಇನ್ನು ಗಂಭೀರವಾದಂತಹ ಸವಾಲುಗಳನ್ನು ಸಮ್ಮಿಶ್ರ ಸರ್ಕಾರ ಎದುರಿಸಬೇಕಾಗುತ್ತದೆ. ಮಾನ್ಯ ಸಿದ್ದರಾಮಯ್ಯನವರೇ ಮುಂದೆ ಬರತಕ್ಕಂಥ ದಿವಸಗಳಲ್ಲಿ ನೀವು ಇನ್ನು ಗಂಭೀರವಾದಂತಹ ಸವಾಲುಗಳನ್ನು ಸಮ್ಮಿಶ್ರ ಸರ್ಕಾರ ಎದುರಿಸಬೇಕಾಗಿದೆ. ಏಕೆಂದರೆ it is a new experience ಈ ಗಂಭೀರವಾದಂತಹ ಸವಾಲುಗಳನ್ನು

ಹೇಳಿದರು. ಇದು ಮಾರ್ಕ್ಸಿಸ್ಟ್ ಪಾರ್ಟಿಯವರಿಗೆ ಸ್ವಲ್ಪ ಅನುಭವ ಇದೆ. I appreciate that. ಅದು ವೆಸ್ಟ್ ಬಂಗಾಲ್‌ನಲ್ಲಿ ಇರಬಹುದು. ಕೇರಳದಲ್ಲಿ ಇರಬಹುದು. they have a big experience in running coalition governments. "ಕೋ ಆರ್ಡಿನೇಷನ್ ಕಮಿಟಿಯ ಬಗ್ಗೆ ತಾವು ಸಲಹೆ ಮಾಡಿದ್ದೀರಿ. Definitely at the highest level of our party high command we will discuss.

ಚೇರ್ಮನ್ : ಈ ವಿಚಾರವಾಗಿ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಇನ್ನು ವಿತ್ತೀಯ ಕಾರ್ಯಕಲಾಪಗಳ ಬಗ್ಗೆ. 2005–06ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆಯನ್ನು ಶ್ರೀ ಬಿ.ಎಸ್.ಯಡಿಯೂರಪ್ಪನವರು ಪ್ರಾರಂಭ ಮಾಡಬೇಕು.

ಶ್ರೀ ವೈಜನಾಥ್ ಪಾಟೀಲ್: ಮಾನ್ಯ ಚೇರ್ಮನರವರೇ....

ಚೇರ್ಮನ್: ಮಾನ್ಯ ವೈಜನಾಥ್ ಪಾಟೀಲರೇ, ಈಗಾಗಲೇ ಮಾನ್ಯ ಯಡಿಯೂರಪ್ಪನವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಿದ ಮೇಲೆ ನೀವು ಮಾತನಾಡಿ.

ಶ್ರೀ ವೈಜನಾಥ್ ಪಾಟೀಲ್: ಮಾನ್ಯ ಚೇರ್ಮನ್‌ರವರೇ, ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ. ನನ್ನ ಹೆಸರನ್ನು ಮಾನ್ಯ ಸದಸ್ಯರೊಬ್ಬರು ಪ್ರಸ್ತಾಪ ಮಾಡಿದರು. ನಾವು ಏನು ಹೋರಾಟ ಮಾಡುವುದಕ್ಕೆ ಶುರು ಮಾಡಿದ್ದೇವು. ಅದರ ಬಗ್ಗೆ ಇಲ್ಲಿ ಈ ವಿಷಯ ಚರ್ಚೆಗೆ ಬಂದಿದೆ. ನಿನ್ನೆ ಮೀಟಿಂಗ್ ಆಯಿತು, ಮಾನ್ಯ ಮುಖ್ಯಮಂತ್ರಿಯವರು ನಮ್ಮ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಮಂತ್ರಿಗಳದ್ದು. ಅದು ವಿಷಯ ಬೇರೆ. ಅದು ಕಡತ ನೋಡುವುದು, ಅದು, ಇದು, ಎಂದು ಹೇಳುವಂಥಾದ್ದು. ಆ ವಿಷಯ ಖರೇ ಇದ್ದರೆ ಅದು ತಪ್ಪು ಇರಬಹುದು. ಆದರೆ ನಮ್ಮ ಹೋರಾಟ... ಇದು ಈ ವಿಷಯಕ್ಕೆ ಸಂಬಂಧವಿಲ್ಲ.

ಚೇರ್ಮನ್: ಮಾನ್ಯ ವೈಜನಾಥ್ ಪಾಟೀಲ್‌ರವರೇ. ಈಗ ವಿತ್ತೀಯ ಚರ್ಚೆಯ ಬಗ್ಗೆ ನಾನು ಮಾನ್ಯ ವಿರೋಧಪಕ್ಷದ ನಾಯಕರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇನೆ. ತಾವು ಪ್ರಸ್ತಾಪ ಮಾಡುತ್ತಿರುವಂತಹ ವಿಚಾರದ ಬಗ್ಗೆ ಮಾನ್ಯ ಪಿ.ಜಿ.ಆರ್.ಸಿಂಧ್ಯರವರು ಚರ್ಚೆಗೆ ಉತ್ತರವನ್ನು ಕೊಟ್ಟಿದ್ದಾರೆ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ವೈಜನಾಥ್ ಪಾಟೀಲ್: ಮಾನ್ಯ ಚೇರ್ಮನ್‌ರವರೇ. ಆ ವಿಷಯ ಒಂದು ವೇಳೆ ತಪ್ಪು ಇದ್ದರೆ. ಆ ಘಟನೆ ಸಂಬಂಧಿಸಿದ್ದರೆ. ಅದು ತಪ್ಪು ಎನ್ನುವ ವಿಚಾರದ ಬಗ್ಗೆ ನಾನು ನನ್ನ ವಿಚಾರವನ್ನು ಹೇಳಬೇಕಾಗುತ್ತದೆ. ಇಲ್ಲಿ ನನ್ನ ಹೆಸರನ್ನು ಪ್ರಸ್ತಾಪ ಮಾಡಿದರು, ಅದರ ಸಲುವಾಗಿ ನಾನು ಹೇಳುತ್ತಿದ್ದೇನೆ.

ಚೇರ್ಮನ್: ಆಯಿತು, ಮಾನ್ಯ ಬಿ.ಎಸ್.ಯಡಿಯೂರಪ್ಪನವರೇ. ತಾವು ಭಾಷಣವನ್ನು ಪ್ರಾರಂಭ ಮಾಡಿ.

ವಿತ್ತೀಯ ಕಾರ್ಯಕಲಾಪ

2005–06ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಛೇರ್ಮನ್‌ರವರೆ, ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಉಪಾಧ್ಯಕ್ಷರು ಆಯ್ಕೆಯಾದರು, ಈಗ ಆಯವ್ಯಯದ ಮೇಲೆ ಚರ್ಚೆ ಪ್ರಾರಂಭವಾಗುತ್ತಿದೆ. ಏಕೋ ಗಳಿಗೆ ಸರಿಯಿಲ್ಲವೆಂದು ತೋರುತ್ತದೆ. ನಿನ್ನೆ ರಾತ್ರಿಯಿಂದ ನಡೆದಂಥ ಘಟಾನಾವಳಿಗಳನ್ನು ನೋಡಿದರೆ ಈ ವಿತ್ತೀಯ ಕಾರ್ಯಕಲಾಪದ ಬಗ್ಗೆ ಚರ್ಚೆ ಆರಂಭ ಮಾಡಬೇಕೋ ಬೇಡವೋ ಎನ್ನುವ ಒಂದು ಸಂದಿಗ್ದ ಪರಿಸ್ಥಿತಿಯಲ್ಲಿ ನಾನು ಮಾತನಾಡುವುದಕ್ಕೆ ನಿಂತಿದ್ದೇನೆ. 2005–06ನೇ ಸಾಲಿನ ಆಯವ್ಯಯದ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ, ಏಕೆಂದರೆ ಈ ಸರ್ಕಾರ ಇದ್ದರೆ ಈ ಆಯವ್ಯಯ ಕಾರ್ಯರೂಪಕ್ಕೆ ಬರುತ್ತದೆ! ಸರ್ಕಾರದ ಅಸ್ತಿತ್ವವೇ ನಿನ್ನೆ ರಾತ್ರಿಯಿಂದ ಯಕ್ಷಪ್ರಶ್ನೆಯಾಗಿರುವುದರಿಂದ ಈ ಆಯವ್ಯಯದ ಅನುಷ್ಠಾನ ಎಷ್ಟರಮಟ್ಟಿಗೆ ಆಗಬಹುದು ಎನ್ನುವಂಥದ್ದು ಬಹಳ ಸಂಶಯದಿಂದ ಕೂಡಿರುವಂಥ ಸಂಗತಿಯಾಗಿದೆ. ಈ ಆಯವ್ಯಯ ಹೇಗಿದೆ ಎಂದರೆ ಈ ಬೆಳ್ಳಿಯ ತಟ್ಟೆಯಲ್ಲಿ ಕಪ್ಪೆ ಇಟ್ಟು ಕೊಟ್ಟರೆ ಏನಾಗಬಹುದೋ ಆ ರೀತಿ ಈ ಆಯವ್ಯಯ ಇದೆ. ಜನಹಿತವನ್ನು ಈ ಸರ್ಕಾರ ಸಂಪೂರ್ಣ ಮರೆತಿದೆ. ನಿನ್ನೆಯಿಂದ ಪ್ರಾರಂಭವಾದ ಘಟಾನಾವಳಿಗಳನ್ನು ನೋಡಿದಾಗ ನೆಲಗಳ್ಳರಿಗೆ ಒಂದು ರೀತಿಯ ಸುಗ್ಗಿ ಕಾಲವಾಗಿದೆ. Notification, de-notification ಇತ್ಯಾದಿ ಬೇಕಾದದ್ದು ಬೇಡವಾದದ್ದು ಅನ್ನು ಮಾಡಿಕೊಂಡು ಒಂದು ರೀತಿಯ ಅರಾಜಕತೆ ಪರಿಸ್ಥಿತಿ ಈ ರಾಜ್ಯದಲ್ಲಿ ಪ್ರಾರಂಭವಾಗಿದೆ. ವ್ಯಾಪಕ ಭ್ರಷ್ಟಚಾರ. ವರ್ಷಪೂರ್ತಿ ವರ್ಗಾವಣೆ. ವರ್ಗಾವಣೆಗೆ